# ಬಾಲ ಕಾರ್ಮಿಕತೆ :
# ಒಂದು ಪ್ರದೇಶದ ಮತ್ತು ಸಾಂದರ್ಭಿಕ ದೃಷ್ಟಿಕೋನ

**ಪಿಯೂಷ್ ಆಂಟನಿ, ವಿ. ಗಾಯತ್ರಿ**

ಜಾಗತೀಕರಣ ಮತ್ತು ಅದರ ಪರಿಣಾಮ ಕುರಿತಾದ ಚರ್ಚೆಗಳ ನಂತರದ ಇತ್ತೀಚಿನ ದಿನಗಳಲ್ಲಿ ಬಾಲ ಕಾರ್ಮಿಕತೆಯ ಕುರಿತು ಆಗಿಂದಾಗ ಗಮನ ಹರಿಸುವುದು ಹೆಚ್ಚಾಗಿದ್ದು, ಅವು ಅನೇಕವೇಳೆ ವಿಷಯಗಳ ಬಗ್ಗೆ ಒಂದು ಸುಸಂಬದ್ಧ ತಿಳುವಳಿಕೆಯನ್ನು ಒದಗಿಸುವ ಬದಲು ಕೇವಲ ಅಸಂಗತ ಧ್ವನಿಗಳ ಗದ್ದಲವನ್ನು ಮಾತ್ರ ಎಬ್ಬಿಸಿವೆ. ಬಾಲ ಕಾರ್ಮಿಕತೆಯ ವಿಷಯದಲ್ಲಿ ಇರುವ ದೃಷ್ಟಿಕೋನಗಳಲ್ಲಿನ ವ್ಯತ್ಯಾಸಗಳೇನು? ಈ ಲೇಖನವು ನೀತಿಗಳನ್ನು ಮರುಪರಿಶೀಲಿಸುವ ಮೂಲಕ ವಿಷಯಗಳನ್ನು ಮಕ್ಕಳ ಹಕ್ಕುಗಳ ವಿಶಾಲ ಚೌಕಟ್ಟಿನಲ್ಲಿ ನೆಲೆಗೊಳಿಸಲು ಪ್ರಯತ್ನಿಸುತ್ತದೆ ಅಲ್ಲದೆ ಮಕ್ಕಳ ಕೆಲಸ ಹಾಗೂ ಶಿಕ್ಷಣದ ಬಗ್ಗೆ ಇರುವ ಅಸ್ಪಷ್ಟತೆಗಳನ್ನು ಗುರುತು ಮಾಡುತ್ತಾ ಭಾರತದಲ್ಲಿ ಬಾಲ್ಯದ ಪರಿಕಲ್ಪನೆಯನ್ನು ವಿವರವಾಗಿ ವಿವರಿಸಲು ಸಹ ಅದು ಪ್ರಯತ್ನಿಸುತ್ತದೆ.

ಜಗತ್ತಿನ ಅತ್ಯಂತ ಹೆಚ್ಚು ಬಾಲ ಕಾರ್ಮಿಕರಿರುವ ದೇಶದಲ್ಲಿ ಬಾಲ ಕಾರ್ಮಿಕ ವಿಷಯವನ್ನು ಒಂದು ಸಮಸ್ಯೆಯೆಂದು ಪರಗಣಿಸಲಾಗುವುದೇ ಇಲ್ಲ! ಆದರೆ ದೇಶದ ಅಧಿಕೃತ ನಿಲುವು ಅದನ್ನು ಪ್ರವರ್ಧಮಾನ ರಾಷ್ಟ್ರದ ಸ್ಥಾನಮಾನ ಪಡೆದಿರುವ ದೇಶವೊಂದರಲ್ಲಿ ಅಂತರ್ಗತವಾಗಿರುವ 'ಒಂದು ಕಟುವಾದ ವಾಸ್ತವ' ಎಂದು ಒಪ್ಪಿಕೊಂಡು ಈ ಸಮಸ್ಯೆಯನ್ನು ಉದಾಸೀನತೆಯಿಂದ ತೇಲಿಸಿಬಿಡುವುದನ್ನು ನಾವು ಕಂಡಾಗ ಅದು ಹೆಚ್ಚೇನೂ ಆಶ್ಚರ್ಯವೆನಿಸುವುದಿಲ್ಲ. ಅಂತಹ ನಿಲವಿನ ಅನೇಕ ಸೂಚ್ಯಪರಿಣಾಮಗಳ ಪೈಕಿ ಸ್ಪಷ್ಟವಾಗಿ ಎದ್ದುಕಾಣುವುದು ಒಂದೆಂದರೆ ಬಡತನ ಬಾಲಕಾರ್ಮಿಕರನ್ನು ಒದಗಿಸುವ ವಾಸ್ತವವನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಮೂಲ ಕಾರ್ಯಕಾರಣ ಎಂಬುದು. ಬಡತನ ಇರುವಷ್ಟು ಕಾಲ ಮಕ್ಕಳನ್ನು ನಿಷ್ಕರುಣೆಯಿಂದ ಕೆಲಸಕ್ಕೆ ಕಳುಹಿಸುವ ಬಾಲಕಾರ್ಮಿಕ ಪೂರೈಕೆಯ ವ್ಯವಸ್ಥೆ ಇರುವುದು ನಿರೀಕ್ಷಿತವೇ. ಸಾರ್ವತ್ರಿಕ ಮೂಲ ಶಿಕ್ಷಣ ಲಭಿಸಬೇಕೆಂಬ ಸಂವಿಧಾನದ ನಿಬಂಧನೆ ಎಷ್ಟರಮಟ್ಟಿಗೆ ಸಫಲವಾಗಿದೆಯೆಂಬ ಗುಪ್ತವಾಗಿರುವ ಅಂಕಿಅಂಶಗಳು ಹೊರಬರುವುದನ್ನು ಸಹ ಇದು ಅಡ್ಡಿಪಡಿಸುತ್ತದೆ. ಬಡತನ ಒಂದೇ ಕಾರಣ ಎಂಬ ವಾದಕ್ಕೆ ನೀಡಿರುವ ಪ್ರಾಮುಖ್ಯತೆಯನ್ನು ಐತಿಹಾಸಿಕ ಆಧಾರಗಳಾಗಲಿ ದೇಶದೊಳಗಿನ ವಾಸ್ತವದ ಅನುಭವಗಳಾಗಲಿ ಬೆಂಬಲಿಸದಿದ್ದರೂ ಪ್ರಭುತ್ವ ಮಾತ್ರ ಸ್ವಾತಂತ್ರ್ಯ ಬಂದಾಗಿನಿಂದಲೂ ಅದಕ್ಕೆ ಬಲವಾಗಿ ಆತುಕೊಂಡಿದೆ. ಅದೇ ವೇಳೆಗೆ, ಈ ಹಿಂದೆ ಬಾಲ ಕಾರ್ಮಿಕ ವಿಷಯಕ್ಕೆ ಆಗೊಮ್ಮೆ ಈಗೊಮ್ಮೆ ಗಮನ ಸೆಳೆದ ಸಂದರ್ಭಗಳು, ಅದರಲ್ಲೂ ವಿಶೇಷವಾಗಿ ಜಾಗತೀಕರಣದ ಹಿನ್ನೆಲೆಯಲ್ಲಿ ಆದ ನೀತಿ ಚರ್ಚೆಗಳು ಅಸಂಗತ ಧ್ವನಿಗಳ ಗದ್ದಲ ಎಬ್ಬಿಸುವಲ್ಲಿ ಸಫಲವಾದವೇ ಹೊರತು, ಒಂದು ಸಂಘಟಿತವಾದ ಕಟುಟೀಕೆಯ ಧ್ವನಿಗಳಾಗಿ ರೂಪುಗೊಳ್ಳಲಿಲ್ಲ. ಶೈಕ್ಷಣಿಕ ವಲಯದಲ್ಲಾಗಲಿ ಸರ್ಕಾರೇತರ ಅಭಿವೃದ್ಧಿ ಸಂಬಂಧಿ ಸಂಸ್ಥೆಗಳನ್ನು ಪ್ರತಿನಿಧಿಸುವವರಲ್ಲಾಗಲಿ ಬಾಲಕಾರ್ಮಿಕ ವಿಷಯ ಕುರಿತಂತೆ ಏಕೆ ಒಂದು ಸಾಮಾನ್ಯ ದೃಷ್ಟಿಕೋನವನ್ನು ಹೊಂದಿಲ್ಲ? ಈ ಲೇಖನವು ವಿರೂಪ ದೃಷ್ಟಿಕೋನಗಳು ಹಾಗೂ ಪರಿಗಣಿಸದ ವಿಷಯಗಳನ್ನು ಅರ್ಥಮಾಡಿಕೊಳ್ಳಲು ಬಾಲ ಕಾರ್ಮಿಕ ವಿಷಯದ ಕುರಿತು ಇರುವ ಭಿನ್ನಾಭಿಪ್ರಾಯಗಳನ್ನು ಚರ್ಚಿಸುವ ಉದ್ದೇಶವನ್ನು ಹೊಂದಿದೆ. ಮೊದಲನೆಯ ಭಾಗವು ಬಾಲ ಕಾರ್ಮಿಕ ವಿಷಯಕ್ಕೆ ಸಂಬಂಧಿಸಿದ ಮುಖ್ಯ ಸಮಸ್ಯೆಗಳನ್ನು ಸಂಕ್ಷಿಪ್ತವಾಗಿ ಚರ್ಚಿಸುತ್ತದೆ. ಎರಡನೆಯ ಭಾಗವು ಈ ಸಮಸ್ಯೆಗಳನ್ನು ಪ್ರಭುತ್ವದ ಕೆಲವು ನೀತಿಗಳನ್ನು ಮರುಪರಿಶೀಲನೆ ಮಾಡುವ ಮೂಲಕ ಮಕ್ಕಳ ಹಕ್ಕುಗಳ ವಿಶಾಲವಾದ ಚೌಕಟ್ಟಿನಲ್ಲಿ ಗ್ರಹಿಸಲು ಪ್ರಯತ್ನಿಸುತ್ತದೆ. ಕೊನೆಯ ಭಾಗವು ಭಾರತದಲ್ಲಿ ಬಾಲ್ಯದ ಪರಿಕಲ್ಪನೆಯನ್ನು ವಿವರವಾಗಿ ವಿವರಿಸುತ್ತದೆ ಮತ್ತು ಅದನ್ನು ಮಕ್ಕಳ ಕೆಲಸ ಹಾಗೂ ಶಿಕ್ಷಣಕ್ಕೆ ಸಂಬಂಧಿಸಿದಂತೆ ಇರುವ ಅಸ್ಪಷ್ಟತೆಗಳಿಗೆ ಸಂಬಂಧಿಸುತ್ತದೆ. ಈ ಬರಹದ ಉದ್ದೇಶವು, ಬಾಲ ಕಾರ್ಮಿಕತೆ ಕುರಿತಂತೆ ಭಾರತದಲ್ಲಿ ಬಾಲ್ಯದ ಸಾಮಾಜಿಕ

ಪರಿಕಲ್ಪನೆಯ ಆಧಾರವಾಗಿರುವ ಕಲ್ಪನೆಗಳಿಂದ ತನ್ನ ಮೂಲ ಪ್ರಮೇಯಗಳನ್ನು ಪಡೆದುಕೊಳ್ಳುವ ಒಂದು ದೃಷ್ಟಿಕೋನಕ್ಕೆ ಕೊಡುಗೆ ನೀಡಿ ರೂಪಿಸಿಕೊಳ್ಳುವಂತೆ ಒತ್ತಾಯಿಸುವುದಾಗಿದೆ.

# I

ಬಾಲ ಕಾರ್ಮಿಕತೆ ಕುರಿತ ಯಾವುದೇ ಚರ್ಚೆಯಲ್ಲಿ ಮೇಲೇಳುವ ಪ್ರಶ್ನೆಯೆಂದರೆ 'ನಾವು ಯಾರ ಬಗ್ಗೆ ಮಾತಾಡುತ್ತಿದ್ದೇವೆ?' ಎನ್ನುವುದು. 5-14 ವಯೋಮಾನದಲ್ಲಿ ಶಾಲೆಯಿಂದ ಹೊರಗುಳಿದಿರುವ ಪ್ರತಿಯೊಂದು ಮಗುವನ್ನು ಉಲ್ಲೇಖಿಸುತ್ತಿದ್ದೇವೆಯೆ ಅಥವಾ ವೇತನ ಪಡೆಯುವ ಮಕ್ಕಳನ್ನೆ ಅಥವಾ ಮನೆಯ ಹೊರಗೆ ಕೆಲಸ ಮಾಡುವ ಮಕ್ಕಳನ್ನೆ ಅಥವಾ ಅಪಾಯಕಾರಿ ಉದ್ಯಮಗಳಲ್ಲಿ ಕಾರ್ಮಿಕರಾಗಿ ದುಡಿಯುವ ಮಕ್ಕಳನ್ನೆ? ನಿಜಕ್ಕೂ ಹೀಗೆ ನಮಗೆ ಬಹು ಆಯ್ಕೆಗಳಿರುವುದು ವ್ಯಾಖ್ಯಾನದ ಸಮಸ್ಯೆಯಾಗಿದೆ. ಗಮನಿಸಬೇಕಾದ ಒಂದು ಅತಿಮುಖ್ಯ ವ್ಯತ್ಯಾಸವೆಂದರೆ ಅದು ಮಕ್ಕಳ ಕೆಲಸ ಮತ್ತು ಬಾಲ ಕಾರ್ಮಿಕತೆ (Lieten(ಲಿಯಟನ್), 2002) ಎಂಬ ಪರಿಭಾಷೆಗಳ ನಡುವಿನ ವ್ಯತ್ಯಾಸ. ಮೊದಲನೆಯದು ಸರ್ವೇಸಾಮಾನ್ಯ ಪದವಾಗಿದ್ದು ಅದು ಮಕ್ಕಳನ್ನು ವೇತನದ ಅಥವಾ ವೇತನವಿಲ್ಲದ ಕೆಲಸದಲ್ಲಿ, ಆರ್ಥಿಕ ಅಥವಾ ಆರ್ಥಿಕೇತರ ಚಟುವಟಿಕೆಗಳಲ್ಲಿ, ಮನೆಯಲ್ಲಿ ಅಥವಾ ಮನೆಯ ಹೊರಗಿನ ಕೆಲಸದಲ್ಲಿ ತೊಡಗಿಸಿಕೊಂಡಿರವುದನ್ನು ಸೂಚಿಸುತ್ತದೆ ಮತ್ತು ಅದು ಕೆಲಸದಲ್ಲಿ ಮಕ್ಕಳ ತೊಡಗಿಸಿಕೊಳ್ಳುವಿಕೆಯು ಅವರ ಬೆಳವಣಿಗೆಯನ್ನು ಪರಿಣಾಮಿಸುತ್ತದೆ ಎಂಬ ಮೂಲ ಪ್ರಮೇಯದ ಮೇಲೆ ಆಧಾರಿತವಾಗಿದೆ. ನಂತರದ ಪ್ರವರ್ಗಗಳು ಹೆಚ್ಚು ನಿರ್ದಿಷ್ಟವಾಗಿದ್ದು ಅವು ಮಕ್ಕಳ ಬೆಳವಣಿಗೆಗೆ ಹಾನಿಯನ್ನು ಉಂಟುಮಾಡುವಂತಹ ಕಾರ್ಮಿಕ ಮಾರುಕಟ್ಟೆಯಲ್ಲಿ ಅವರು ತೊಡಗಿಕೊಳ್ಳುವುದನ್ನು ಸೂಚಿಸುತ್ತದೆ. ತತ್ಪರಿಣಾಮವಾಗಿ, ನಮಗೆ ಮಾಪನದ ಸಮಸ್ಯೆ ಇದೆ. ದತ್ತಾಂಶ ಮೂಲಗಳನ್ನು ಅವಲಂಬಿಸಿ ಒದಗಿಸುವ ಸಂಪೂರ್ಣ ಅಂಕಿಅಂಶಗಳಲ್ಲಿ ದೊಡ್ಡ ವ್ಯತ್ಯಾಸಗಳು ಕಂಡುಬರುವುದರಿಂದ ಬಾಲ ಕಾರ್ಮಿಕತೆಯ ಪ್ರಮಾಣದ ಅಂದಾಜು ವಿವಾದಾತ್ಮಕ ವಿಷಯವಾಗಿ ಉಳಿದಿದೆ (Chaudhri (ಚೌಧರಿ) ಮತ್ತು Wilson (ವಿಲ್ಸನ್) 2002).

ಎರಡನೆಯ ಸಮಸ್ಯೆ ಕಾರಣೀಭೂತ ಅಂಶಗಳಿಗೆ ಸಂಬಂಧಿಸಿದ್ದು, ಅದು ಬಡತನದ ವಾದ ಮತ್ತು ಶಿಕ್ಷಣದ ವಾದದ ನಡುವೆ ಹೊಯ್ದಾಡುತ್ತದೆ. ಆದಾಗ್ಯೂ, ಬಾಲ ಕಾರ್ಮಿಕತೆಯ ಭೌಗೋಳಿಕ, ಆರ್ಥಿಕ ಮತ್ತು ಸಾಮಾಜಿಕ ಆಯಾಮಗಳು ದತ್ತವಾಗಿರುವುದರಿಂದ, ಕೆಳ ಮಟ್ಟದ ಆರ್ಥಿಕ ಸ್ಥಾನಮಾನದೊಂದಿಗೆ ಜಾತಿ, ಲಿಂಗ, ಜನಾಂಗೀಯತೆ ಮತ್ತು ಜೀವನೋಪಾಯ ಭದ್ರತೆಯಂತಹ ಇತರ ಅನಾನುಕೂಲ ಪರಿಸ್ಥಿತಿಗಳು ಸೇರಿಕೊಂಡಾಗ ಈ ಸಮಸ್ಯೆಯು ಮತ್ತಷ್ಟು ಉಲ್ಬಣಗೊಳ್ಳುತ್ತದೆ ಎಂಬುದು ಈಗಾಗಲೇ ದೃಢೀಕರಿಸಿದ ಸಂಗತಿಯಾಗಿದೆ. ಸ್ಪಷ್ಟವಾಗಿ ಪ್ರಚಲಿತದಲ್ಲಿನ ಬಾಲ ಕಾರ್ಮಿಕತೆಯನ್ನು ಶಿಕ್ಷಣಕ್ಕೆ ಬೇಡಿಕೆ ಇಲ್ಲದೇ ಇರುವುದರ ಮೂಲಕ ಅಥವಾ ಅದರ ಖರ್ಚನ್ನು ಭರಿಸಲು ಸಾಧ್ಯವಾಗದಿರುವ ಮೂಲಕ ವಿವರಿಸುವಲ್ಲಿ ಬಡತನ ಒಂದು ಪಾತ್ರ ಹೊಂದಿದೆಯಾದರೂ, ಅದೊಂದು ಮೀರಲಾಗದ ತಡೆಯೇನಲ್ಲ (Kabeer (ಕಬೀರ್) 2001). ಅಲ್ಲದೆ, ರಾಜ್ಯಮಟ್ಟದ ವಿಶ್ಲೇಷಣೆ ಈ ಬಡತನದ ವಾದವನ್ನು ಬೆಂಬಲಿಸುವುದಿಲ್ಲ, ಏಕೆಂದರೆ ಬಾಲಕಾರ್ಮಿಕತೆ ಪ್ರಚಲಿತದಲ್ಲಿರುವ ಸಂಖ್ಯೆ ಕಡಮೆಯಿರುವ ರಾಜ್ಯಗಳು ಅಗತ್ಯವಾಗಿ ಶ್ರೀಮಂತ ರಾಜ್ಯಗಳೇನಲ್ಲ (Mahendra Dev (ಮಹೇಂದ್ರ ದೇವ್) ಮತ್ತು Ravi (ರವಿ) 2002). ಕೇರಳ ರಾಜ್ಯವು ಇಂತಹ ಒಂದು ಉದಾಹರಣೆಯಾಗಿದೆ. ಬಾಲ ಕಾರ್ಮಿಕತೆ ಮತ್ತು ಕೆಳ ಮಟ್ಟದ ಶೈಕ್ಷಣಿಕ ಸ್ಥಾನಮಾನದ ನಡುವೆ ವಿಲೋಮ ಸಂಬಂಧ ಇರುವುದರಿಂದ ಈ ಕಾರಕಗಳು ಪರಸ್ಪರ ಒಂದನ್ನೊಂದು ಬಲಗೊಳಿಸುವಂತದ್ದಾಗಿವೆಯೆ ವಿನಃ ವಿರೋಧಾತ್ಮಕವಾಗಿ ಇಲ್ಲ ಎಂಬುದು ಸ್ಪಷ್ಟವಾಗಿದೆ. ಹಾಗಾಗಿ ಈ ಎರಡು ಕಾರಣೀಭೂತಗಳ ನಡುವೆ ಮಾಡಿರುವ ಭೇದಕ್ಕೆ ವಿಶ್ಲೇಷಣಾತ್ಮಕ ಸ್ವೀಕಾರಾರ್ಹತೆ ಇಲ್ಲ. ಬಾಲ ಕಾರ್ಮಿಕತೆಯನ್ನು ಕಡಮೆ ಮಾಡಲು/ ತೊಡೆದುಹಾಕಲು ರೂಪಿಸಿಕೊಳ್ಳುವಂತ ಯೋಜನೆಗಳನ್ನು (ಮಧ್ಯಪ್ರವೇಶಿಕೆಗಳನ್ನು) ಆದ್ಯತೆ ಮೇರೆಗೆ ವ್ಯವಸ್ಥಿತಗೊಳಿಸಿಕೊಳ್ಳುವಲ್ಲಿ ಅಥವಾ ಯೋಜಿಸುವಲ್ಲಿ ಕಾರ್ಯಕ್ರಮಗಳಿಗೆ ಅದು ಹೆಚ್ಚು ಸಂಗತವೆಂದು ತೋರುತ್ತದೆ, ಏಕೆಂದರೆ ಗುರುತಿಸಲಾದ ಕಾರಣ ಪರಿಹಾರಮಾರ್ಗವನ್ನು ಹಾಗೂ ಕೈಗೊಳ್ಳುವ ಕ್ರಮವನ್ನು ನಿರ್ಧರಿಸುತ್ತದೆ. ಕೆಲವು ಸಮುದಾಯಗಳ ಮಟ್ಟಿಗೆ

ಬಹುಸಂಖ್ಯೆಯ ಅಂಶಗಳು ಒಟ್ಟಿಗೆ ಸೇರಿ ಅನಾನುಕೂಲತೆಗಳನ್ನು ಸೃಷ್ಟಿಸುತ್ತವೆ ಎಂಬುದು ಕೂಡ ಇತ್ತೀಚೆಗೆ ಹೆಚ್ಚಿನವರು ಒಪ್ಪಿದ ಸಂಗತಿಯಾಗಿದೆ. ಈ ಕಾರಕಗಳು ಆ ಸಮುದಾಯಗಳು ಹೆಚ್ಚು ಉತ್ಪಾದಕವಲ್ಲದ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದರಿಂದ ಹಿಡಿದು, ಕಾರ್ಮಿಕ ಸಂಬಂಧಗಳು ಮತ್ತು ಒಂದು ನಿರ್ದಿಷ್ಟ ಉತ್ಪಾದನಾ ಕ್ಷೇತ್ರದಲ್ಲಿ ಉತ್ಪಾದನೆಯು ವ್ಯವಸ್ಥಿತಗೊಂಡಿರುವ ರೀತಿ, ಪಾರಂಪರಿಕ ಉದ್ಯೋಗಗಳಿಗೆ ನಿಷ್ಠಾವಂತರಾಗಿರುವುದು, ಮೂಲ ಸೌಲಭ್ಯಗಳು ಹಾಗೂ ಶಾಲಾಶಿಕ್ಷಣ ಸೇರಿದಂತೆ ಮೂಲಸೌಕರ್ಯಗಳ ಅಭಿವೃದ್ಧಿಯ ಕೊರತೆ ಹಾಗೂ, ಸಾಮಾಜಿಕ ಸ್ಥಾನಮಾನ ಮತ್ತು ಶಿಕ್ಷಣವನ್ನು ಒಂದು ಜೀವನ ಕೌಶಲವೆಂದು ಮತ್ತು ಶಿಕ್ಷಣದಿಂದ ವೃದ್ಧಿಯಾಗುವ ಮೌಲ್ಯವನ್ನು ಸ್ವೀಕರಿಸುವುದನ್ನು ನಿರ್ಧರಿಸುವಂತ ಮುಖ್ಯವಾಹಿನಿಯ ಅಭಿವೃದ್ಧಿಗೆ ಒಡ್ಡಿಕೊಳ್ಳಲು ಸಮುದಾಯಕ್ಕೆ ಲಭ್ಯವಿರದ ಅವಕಾಶಗಳನ್ನು ಒಳಗೊಂಡಿದೆ.

ಬಡತನದ ಕಾರಣ ಇಲ್ಲವೇ ಶಿಕ್ಷಣದ ಸೇವೆಗಳ ಕೊರತೆಯ ಕಾರಣವೇ ಆಗಿರಲಿ, ಬಾಲಕಾರ್ಮಿಕತೆಯು ಸಾಮಾಜಿಕವಾಗಿ ಮರುಸೃಷ್ಟಿಯಾಗುವಂತದ್ದು ಎಂಬುದು ಒಂದು ಕಟು ಸತ್ಯ. ಎಲ್ಲಾ ತಲೆಮಾರುಗಳಲ್ಲಿಯೂ ಅದರ ಮರುಸೃಷ್ಟಿಯನ್ನು ಬೆಂಬಲಿಸುವಂತಹ ವ್ಯವಸ್ಥೆಯ ಕಾರಕಗಳು  ಹೆಚ್ಚಿನ ಮಟ್ಟಿಗೆ ಬದಲಾಗದೆ ಇರುವುದು ಮತ್ತು ನೀತಿಗಳು ಅಥವಾ ಅವುಗಳ ಕೊರತೆಯು ಅದನ್ನೇ ಬಲಗೊಳಿಸುವುದು ಎಂಬ ವಾಸ್ತವಾಂಶ ದತ್ತವಾಗಿರುವುದರಿಂದ, ನಾವು ಉದ್ದೇಶಿಸಬೇಕಾದ ಪ್ರಶ್ನೆ, 'ಈ ಮಕ್ಕಳನ್ನು ನಾವು ಹೇಗೆ ಗ್ರಹಿಸುತ್ತೇವೆ?' ಎಂಬುದಾಗಿದೆ. ಅವರ ಕೆಲಸದ ಸ್ಥಾನಮಾನಕ್ಕೆ ಸಂಬಂಧಿಸಿದಂತೆ ಅವರು ಒಂದು ಏಕರೂಪ ಪ್ರವರ್ಗವಲ್ಲ. ಅವರು ಕ್ರಮಬದ್ಧ ಶಿಕ್ಷಣ ವ್ಯವಸ್ಥೆಯ ಭಾಗವಾಗಿರದಿರುವುದು ಮತ್ತು ಆದ್ದರಿಂದ ಶಾಲಾ ವ್ಯವಸ್ಥೆಯ ಹೊರಗುಳಿದಿರುವುದು ಹಾಗೂ ಸಾಮಾಜಿಕವಾಗಿಯೂ ಆರ್ಥಿಕವಾಗಿಯೂ ಅವಕಾಶವಂಚಿತ ಕುಟುಂಬಗಳಿಂದ ಬಂದವರಾಗಿರುತ್ತಾರೆ ಎಂಬುದೊಂದೇ ಅವರು ಪರಸ್ಪರ ಹೊಂದಿರುವಂತ ಸಾಮಾನ್ಯ ಲಕ್ಷಣ.

ಶಾಲಾ ವ್ಯವಸ್ಥೆಯಿಂದ ಹೊರಗುಳಿದ ಮಕ್ಕಳಲ್ಲಿ ಶಾಲೆಯಲ್ಲಿ ಎಂದೂ ದಾಖಲಾತಿ ಆಗದ ಮತ್ತು ದಾಖಲಾತಿ ಆಗಿ ಬಿಟ್ಟು ಹೋದ ಮಕ್ಕಳಿದ್ದಾರೆ. ಕೆಲಸ ಮಾಡುತ್ತಿರುವ ಮಕ್ಕಳನ್ನು ಕೆಲಸದ ನಿಯತತೆ (ಕಾಲಾವಧಿ) (ಪೂರ್ಣಾವಧಿ, ಆಂಶಕಾಲಿಕ, ಕಾಲೋಚಿತ), ಕೆಲಸದ ಪರಿಸ್ಥಿತಿ (ಅಪಾಯದ ಅಥವಾ ಶೋಷಣೆಯ ಪ್ರಮಾಣ), ಕೆಲಸದ ಸಾಮಾಜಿಕ ಸಂಬಂಧ (ಜೀತದಾಳು, ಕುಟುಂಬ ಆಧಾರಿತ ಕೃಷಿತೋಟ ಅಥವಾ ಉದ್ಯಮ, ವೇತನ ಉದ್ಯೋಗ) ಮತ್ತು ಕೆಲಸಕ್ಕೆ ಪಡೆಯುವ ಪ್ರತಿಫಲದ ಸ್ವರೂಪದ ಆಧಾರದ ಮೇಲೆ (ವೇತನವಿಲ್ಲದ ಕೌಟುಂಬಿಕ ಕೆಲಸ, ವಸ್ತುರೂಪದಲ್ಲಿ ವೇತನ, ತುಂಡಕೆಲಸ ಆಧಾರಿತ ವೇತನ, ಕಾಲಕೆಲಸ ಆಧಾರಿತ ವೇತನ) ಅರ್ಥೈಸಿಕೊಳ್ಳಬಹುದು. ಇದರಲ್ಲಿ,  ಶಾಲೆಗೂ ಹೋಗದ ಅಥವಾ ಕೆಲಸದಲ್ಲಿಯೂ ಇರದಂತಹ ಲೆಕ್ಕಕ್ಕೆ ಸಿಗದ ಅಥವಾ ಎಲ್ಲೂ ಸೇರದ (ಯಾವ ಪ್ರವರ್ಗಕ್ಕೂ ಸೇರದ) ಮಕ್ಕಳ ಸಂಖ್ಯಾಶಾಸ್ತ್ರೀಯ ಪ್ರವರ್ಗವೊಂದನ್ನು ನಾವು ಸೇರಿಸಿಕೊಳ್ಳುವ ಅಗತ್ಯವಿದೆ (ಚೌಧರಿ 1996). ಕೆಲವರು ಈ ಮಕ್ಕಳು ಸಂಭವನೀಯ ಬಾಲಕಾರ್ಮಿಕರು ಎಂದು ವಾದಿಸುತ್ತಾರೆ ಮತ್ತು ಈ ಹೇಳಿಕೆಯನ್ನು  ಸಮರ್ಥಿಸಿಕೊಳ್ಳಲು ಕಾಲೋಪಯೋಗಿ ಅಂಕಿಅಂಶಗಳನ್ನು ಉಲ್ಲೇಖಿಸುತ್ತಾರೆ, ಇತರರು ಈ ಮಕ್ಕಳು ಅವರ  ಮನೆಗಳಲ್ಲಿ ವೇತನವಿಲ್ಲದ ಆರ್ಥಿಕೇತರ ಅಥವಾ ಆರ್ಥಿಕ ಚಟುವಟಿಕೆಗಳಾದ ಒಡಹುಟ್ಟಿದವರನ್ನು ನೋಡಿಕೊಳ್ಳುವುದು, ಪ್ರಾಣಿಗಳನ್ನು ನೋಡಿಕೊಳ್ಳುವುದು ಮತ್ತು ಕುಟುಂಬದ ಉದ್ಯಮ ಮುಂತಾದವುಗಳಲ್ಲಿ ತೊಡಗಿಕೊಂಡಿರುತ್ತಾರೆ ಎಂದು ವಾದಿಸುತ್ತಾರೆ. ಹೆಚ್ಚು ಪ್ರಬಲವಾಗಿರುವ ಯೋಚನಾಕ್ರಮವು ಈ ವಿವಿಧ ಪ್ರವರ್ಗಗಳ ಅವಕಾಶವಂಚಿತ ಮಕ್ಕಳನ್ನು ಒಂದೋ ಶಾಲೆಯಲ್ಲಿರುವ ಮಕ್ಕಳು ಅಥವಾ ಕೆಲಸದಲ್ಲಿರುವ ಮಕ್ಕಳು ಎಂಬ ದ್ವಂದ್ವ ರೂಪದಲ್ಲಿ ಮಾತ್ರ ಅರ್ಥ ಮಾಡಿಕೊಳ್ಳುವುದಾಗಿದೆ. ಆದರೆ ಇಂತಹ ದ್ವಂದ್ವಾತ್ಮಕ ಯೋಚನಾಕ್ರಮವು ಬಾಲ್ಯಾವಸ್ಥೆಗೆ ಸಂಬಂಧಿಸಿದ ಹಲವು ಪ್ರಶ್ನೆಗಳನ್ನು ಎತ್ತುತ್ತದೆ. ಇಲ್ಲದಿದ್ದರೂ ಕೂಡ, ಪರಿಭಾಷೆಗಳಲ್ಲಿನ ವ್ಯತ್ಯಾಸಗಳು ಹಾಗೂ ಮಕ್ಕಳ ಕುರಿತಂತೆ 'ಕೆಲಸ' ವೆಂದರೆ ಏನು ಎಂಬುದು ಹೆಚ್ಚಿನ ಮಟ್ಟಿಗೆ ಬಾಲ್ಯದ ಪರಿಕಲ್ಪನೆಯನ್ನು  ಆಧರಿಸಿಯೇ ಹುಟ್ಟುತ್ತವೆ.

## II

ಬಾಲ್ಯ ಎಂಬ ಪರಿಕಲ್ಪನೆಯನ್ನು ಆಳವಾಗಿ ಪರಿಶೀಲನೆ ಮಾಡುವ ಮೊದಲು ಮಕ್ಕಳ ಹಕ್ಕುಗಳ ಪರಿಕಲ್ಪನೆಯ ವಿಕಸನ ಕುರಿತು ಒಂದು ಚರ್ಚೆಯನ್ನು ಮಾಡುವುದು ಅತ್ಯಗತ್ಯವಾಗುತ್ತದೆ. ಅಭಿವೃದ್ಧಿಗೆಂದು ರೂಪಗೊಂಡ ಇತರ ಹಲವು 'ಹಕ್ಕು ಆಧಾರಿತ ವಿಧಾನ' ಗಳೊಂದಿಗೆ ರೂಪಗೊಂಡ ಪಾಶ್ಚಾತ್ಯ ಪರಿಕಲ್ಪನೆಯಾದ ಮಕ್ಕಳ ಹಕ್ಕುಗಳು ಭಾರತದ ಅಭಿವೃದ್ಧಿ ರಂಗಕ್ಕೆ ಸ್ವಲ್ಪ ತಡವಾಗಿಯೇ ಸೇರಿಕೊಂಡ ವಿಷಯವಾಗಿದೆ. ವಿಧ್ಯುಕ್ತ ಶಿಕ್ಷಣ ವ್ಯವಸ್ಥೆಯಿಂದ ಚೆನ್ನಾಗಿ ಅಂದಮಾಡಿಕೊಳ್ಳುವುದನ್ನು ಕಲಿತ, ವಯಸ್ಕರ ಲೋಕದಲ್ಲಿನ ಆಗುಹೋಗುಗಳಿಂದ ಪ್ರಭುತ್ವ ಹಾಗೂ ಕುಟುಂಬದಿಂದ ಸಂರಕ್ಷಿಸಲಾದ, ನಗರದ, ಮೇಲ್ವರ್ಗದ, ಉತ್ತರ ಅಮೇರಿಕಾದ/ ಯುರೋಪಿನ ಮಗುವಿನ ರಮ್ಯೀಕರಿಸಿದ ಕಲ್ಪನೆಯು ಸಾರ್ವತ್ರಿಕ ಬಾಲ್ಯದ ಪರಿಕಲ್ಪನೆಯ 'ಆದರ್ಶ ಮಾದರಿ' ಯಾಗಿ ರೂಪಗೊಂಡಿತ್ತು. ಮತ್ತು, ಮಕ್ಕಳ ಹಕ್ಕುಗಳನ್ನು ಅಂತಹ ಬಾಲ್ಯದ ಕಲ್ಪನೆ ಬೇಡುವಂತ ಹಲವು ಬಗೆಯ ಸಂರಕ್ಷಣೆಗಳ ಆಧಾರದ ಮೇಲೆ ವ್ಯಕ್ತಪಡಿಸಲಾಯಿತು. ಇದೇ ಚಿಂತನೆಯು ಜಾಗತಿಕವಾಗಿ ನೀತಿನಿರೂಪಣೆಗಳಲ್ಲಿ ಪ್ರಧಾನವಾಗಿದ್ದವು ಮತ್ತು ಅನೇಕ ಅಂತಾರಾಷ್ಟ್ರೀಯ ನೀತಿ ಸನದುಗಳಲ್ಲಿ ಪ್ರತಿಬಿಂಬಿತವಾಗಿವೆ (Gayathri (ಗಾಯತ್ರಿ) ಮತ್ತು Chaudhri (ಚೌಧರಿ) 2002). ಬಾಲ್ಯ ಎಂಬುದು ಒಂದು ಸಾಮಾಜಿಕ ಪರಿಕಲ್ಪನೆ ಮತ್ತು ಅದು ವಿವಿಧ ಸಂಸ್ಕೃತಿಗಳಲ್ಲಿ, ಬೇರೆ ಬೇರೆ ಕಾಲಾ ದೇಶದಲ್ಲಿ ಬೇರೆ ಬೇರೆಯಾಗಿರುತ್ತದೆ ಎಂಬ ವಾಸ್ತವದ ಆಧಾರದ ಮೇಲೆ ಮಾತ್ರ ಅಲ್ಲದೆ ಜಗತ್ತಿನ ಆ ಭಾಗದಲ್ಲಿಯೂ ಅದು ಸಂಪೂರ್ಣವಾಗಿ ಸಮರ್ಥನೀಯವಲ್ಲ ಎಂಬ ಅಧಾರದ ಮೇಲೆ ಅದಕ್ಕೆ ಪ್ರತಿರೋಧ ವ್ಯಕ್ತವಾಯಿತು. ವೈವಿಧ್ಯಮಯ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಹೊಂದಿರುವ ವಿವಿಧ ಪ್ರದೇಶಗಳ ಮೇಲೆ ಸಾರ್ವತ್ರಿಕ ಬಾಲ್ಯದ ಹಾಗೂ ಮಕ್ಕಳ ಹಕ್ಕುಗಳ ಪ್ರಮಾಣಕಗಳನ್ನು ಹೇರುವುದರ ಅಪಾಯಕ್ಕೆ ಗಮನ ಸಳೆದ ಸಂಘಟಿತ ಪ್ರಯತ್ನಗಳು ಕೆಲವು ಫಲಿತಾಂಶಗಳನ್ನು ನೀಡಿವೆ. ಮಕ್ಕಳಿಗೆ ಸಂಬಂಧಪಟ್ಟ ನೀತಿಗಳನ್ನು ರೂಪಿಸುವಾಗ ಅದು ಆಯಾ ದೇಶದ ವಾಸ್ತವಗಳಲ್ಲಿ ಹೆಚ್ಚು ನೆಲೆಗೊಂಡಿರುವಂತೆ ನೋಡಿಕೊಳ್ಳುವ ಪ್ರಯತ್ನಗಳು ನಡೆದಿದ್ದೂ ಇವೆ. ಬಾಲ ಕಾರ್ಮಿಕತೆಯ ನಿಕೃಷ್ಟ ರೂಪಗಳ ಕುರಿತಾದ 1999 ರ ಐ.ಎಲ್.ಒ. ಒಪ್ಪಂದ (ILO Convention) (182) ಅಂತಹದೊಂದು ಸಾಂಸ್ಕೃತಿಕ ಆಯಾಮಗಳನ್ನು ಒಳಗೊಳ್ಳುವಂತ ಚೌಕಟ್ಟನ್ನು ರೂಪಿಸುವ ಪ್ರಯತ್ನವಾಗಿದೆ.

ಹಾಗಿದ್ದರೂ, ಇದು ಈ ಉಪಖಂಡದಲ್ಲಿ ಈ ಸಮಸ್ಯೆಯನ್ನು ಪರಿಹರಿಸುವಲ್ಲಿ ನೆರವಾಗಿಲ್ಲ. ಭಾರತದ ಸಂದರ್ಭದಲ್ಲಿ, ಬಾಲ್ಯದ ಪರಿಕಲ್ಪನೆಯ ಕುರಿತ ಅನೇಕ ಪ್ರಶ್ನೆಗಳು ಮಕ್ಕಳ ಬಗ್ಗೆ ಒಟ್ಟಾರೆಯಾಗಿ ಮತ್ತು ಬಾಲಕಾರ್ಮಿಕತೆಯ ಬಗ್ಗೆ ನಿರ್ದಿಷ್ಟವಾಗಿ ನಮ್ಮ ನೀತಿಗಳಲ್ಲಿನ ಇಬ್ಬಗೆಯ ನಿಲುವುಗಳಿಂದ ಹುಟ್ಟಿಕೊಂಡಿವೆ. ಅನುಷ್ಠಾನದ ವಿಷಯದಲ್ಲೂ ಕೂಡ ನಾವು ಈವರೆಗೂ ಬಾಲ್ಯದ ಬಗ್ಗೆ ಒಂದು ಒಮ್ಮತಕ್ಕೆ ಬರಲು ವಿಫಲರಾಗಿದ್ದೇವೆ. ಒಂದು ಮಗುವನ್ನು ಅದರ ವಯಸ್ಸಿನ ಆಧಾರದ ಮೇಲೆ ವ್ಯಾಖ್ಯಾನ ಮಾಡಲಾಗುತ್ತದೆ, ಮತ್ತು ಬಾಲ ಕಾರ್ಮಿಕರನ್ನು ವಯಸ್ಕ ಕಾರ್ಮಿಕರಿಂದ ಪ್ರತ್ಯೇಕಿಸಲು ನಮ್ಮ ಸಂವಿಧಾನದಲ್ಲಿನ 14 ವಯಸ್ಸಿಗಿಂತ ಕೆಳಗಿನ ವಯೋಮಾನದ ಮಕ್ಕಳಿಗೆ ಸಾರ್ವತ್ರಿಕ ಮೂಲ ಶಿಕ್ಷಣ ಒದಗಿಸಬೇಕು ಎಂಬ ನಿಬಂಧನೆಯು ಮಾನದಂಡವಾಯಿತು. ನಮ್ಮ ಪ್ರಜಾಪ್ರಭುತ್ವದ ರಾಜ್ಯವ್ಯವಸ್ಥೆ ಮತ್ತು ಶಾಲಾ ಶಿಕ್ಷಣ ವ್ಯವಸ್ಥೆಯು ಪ್ರಾಯಪ್ರಬುದ್ಧತೆಗೆ ಬೇರೆ ಬೇರೆ ವಯೋಮಾನ ಮಿತಿಯನ್ನು ಅನುಸರಿಸುತ್ತದೆಯಾದರೂ, ಕೆಲಸದಲ್ಲಿ ತೊಡಗಿರುವ ಮಗುವೊಂದು 14 ವರ್ಷ ತಲುಪಿದಾಗ ಅದನ್ನು ವಯಸ್ಕ ವ್ಯಕ್ತಿ ಎಂದು ಪರಿಗಣಿಸುತ್ತದೆ. ಅದೇ ವೇಳೆಗೆ, ಕಾರ್ಮಿಕ ಮಾರುಕಟ್ಟೆಯು ಕಾರ್ಮಿಕರ ಕನಿಷ್ಠವೇತನದ ಆಧಾರದ ಮೇಲೆ ಪ್ರಾಯಪ್ರಬುದ್ಧತೆಯನ್ನು ಸ್ವೀಕರಿಸುವ ಮಾನದಂಡವನ್ನು ಅಧಿಕೃತ ದಾಖಲೆಗಳು ಮಗು ಬಾಲಕಾರ್ಮಿಕ ಪ್ರವರ್ಗಕ್ಕೆ ಸೇರುವುದಿಲ್ಲವೆಂದು ಘೋಷಿಸಿದ ಬಹಳ ಕಾಲದ ನಂತರ ಅನ್ವಯಿಸಲಾಗುತ್ತದೆ. ಇಂಡಿಯನ್ ಫ್ಯಾಕ್ಟರಿ ಆಕ್ಟ್ (Indian Factory Act), 1948 ಇದಕ್ಕೆ ಉದಾಹರಣೆಯಾಗಿದೆ. ಗಮನಾರ್ಹವೆಂದರೆ ಇವೆಲ್ಲದರಲ್ಲಿಯೂ ಸಮುದಾಯಗಳು ಬಾಲ್ಯವನ್ನು ವಯಸ್ಕರಿಂದ ಪ್ರತ್ಯೇಕಿಸುವ ವಯೋಮಾನದ ಮಾನದಂಡಗಳ ಕುರಿತು ನಮಗೆ ಯಾವೊಂದು ಮಾಹಿತಿಯೂ ಇಲ್ಲ ಎಂಬುದು. ಉನ್ನತ ಆರ್ಥಿಕ ವರ್ಗದ ಕುಟುಂಬಗಳಲ್ಲಿ ಮಕ್ಕಳಿಗೆ ಹಲವು ಬಗೆಯ ರಕ್ಷಣೆಗಳನ್ನು ಒದಗಿಸುವುದರೊಂದಿಗೆ ಬಾಲ್ಯಾವಧಿಯು ಸಹಜವಾಗಿಯೇ ದೀರ್ಘಾಕಾಲದವರೆಗೂ ಇರುತ್ತದೆ ಎಂಬುದು ಎಲ್ಲರಿಗೂ ತಿಳಿದಿರುವ ವಿಚಾರವೇ ಆಗಿದೆ. ಉದಾಹರಣೆಗೆ, ಹುಡುಗ ಅಥವಾ ಹುಡುಗಿ ಅವರ ಆಯ್ಕೆಯ ಅಧ್ಯಯನ ಕ್ಷೇತ್ರವನ್ನು ಪೂರ್ಣಗೊಳಿಸಿ

ಉದ್ಯೋಗವೊಂದಕ್ಕೆ ಸೇರುವವರೆಗೆ ಮಗುವಿಗೆ ಆರ್ಥಿಕ ಬೆಂಬಲವನ್ನು ಕೊಡಲಾಗುತ್ತದೆ. ತದ್ವಿರುದ್ಧವಾಗಿ, ಕೆಳವರ್ಗದವರಲ್ಲಿ, ಬಾಲ್ಯಾವಸ್ಥೆ ಹಾಗೂ ಮುಂದಿನ ಜೀವನಾವರ್ತನದ ನಡುವಿನ ಅಂತರ ಬಹಳಷ್ಟು ಕಡಮೆ. ಆರ್ಥಿಕ ಕೆಳ ವರ್ಗದ ಮಕ್ಕಳು 'ಹದಿಹರೆಯ'ಕ್ಕಿಂತ ಮುನ್ನವೇ ಅಥವಾ ಹದಿಹರೆಯದಲ್ಲಿ ಕುಶಲ ಅಥವಾ ಕುಶಲವಿಲ್ಲದ ಕೂಲಿಕಾರ್ಮಿಕರಾಗಿ ಕಾರ್ಮಿಕ ಮಾರುಕಟ್ಟೆಗೆ ಸೇರ್ಪಡೆಯಾಗುತ್ತಾರೆ.

ಬಾಲ್ಯಾವಸ್ಥೆಯು ಶಾಲಾಶಿಕ್ಷಣ/ಶಿಕ್ಷಣಕ್ಕೆ ಮೀಸಲಾಗಿದ್ದು ಎಂಬ ಭಾರತ ದೇಶದ ಸುವ್ಯಕ್ತ ಕಲ್ಪನೆಯು ಸಂವಿಧಾನದಲ್ಲಿ ಸುಸ್ಪಷ್ಟವಾಗಿ ಬರೆಯಲ್ಪಟ್ಟಿದೆ. ಆದಾಗ್ಯೂ, ಪ್ರಭುತ್ವ ಅದರ ವಿವಿಧ ನೀತಿಗಳ ಮೂಲಕ ಶಿಕ್ಷಣಕ್ಕೆ ಅವರ ಲಭ್ಯಾವಕಾಶತೆಯ ವಿಚಾರದಲ್ಲಿ ಮಕ್ಕಳನ್ನು ತಾರತಮ್ಯದಿಂದ ನಡೆಸಿಕೊಳ್ಳಲು ಅನುವುಮಾಡಿಕೊಟ್ಟಿದೆ ಎಂಬುದು ಚೆನ್ನಾಗಿ ದಾಖಲಿಸಲ್ಪಟ್ಟಿದೆ (Weiner (ವೈನರ್) 1991). ಅದೇ ವೇಳೆಗೆ ಪ್ರಭುತ್ವವು ಶಾಲಾ ಶಿಕ್ಷಣ ಇಲ್ಲದೆಯೂ ಕೆಲವು ಮಕ್ಕಳು ಬಾಲ್ಯಾವಸ್ಥೆಯನ್ನು ಅನುಭವಿಸಬಹುದು ಎಂಬುದನ್ನು ಸಹಜ ಸುಲಭವಾಗಿ ಒಪ್ಪಿಕೊಳ್ಳುತ್ತದೆ ಮತ್ತು ಆದ್ದರಿಂದ ಅದು ಬಾಲ್ಯ ಕಾರ್ಮಿಕತೆಯನ್ನು ತೊಡೆದುಹಾಕುವ ವಿಚಾರವನ್ನು ಕಾರ್ಯಗತ ಮಾಡಲು ಮನಸ್ಸುಮಾಡಿಲ್ಲ. ಸಾಮಾಜಿಕ ವರ್ಗಗಳ ಆಧಾರದ ಮೇಲೆ ನಿರ್ಮಿತವಾಗಿರುವ ಅಂತಹದೊಂದು ಬಾಲ್ಯದ ಪರಿಕಲ್ಪನೆಯು ಭಾರತ ಸರ್ಕಾರ ಬಾಲ ಕಾರ್ಮಿಕತೆಯು ಕಾನೂನುಬಾಹಿರ ಎಂದು ಘೋಷಿಸಲು ಅಥವಾ ಎಲ್ಲರಿಗೂ ಕಡ್ಡಾಯ ಮೂಲ ಶಿಕ್ಷಣವನ್ನು ಅನುಷ್ಠಾನಗೊಳಿಸಲು ಅಡ್ಡಿಪಡಿಸಿದೆ ಎಂದು ತೋರಿಸಲಾಗಿದೆ. ಈ ವಾದವು ಸಾಮಾಜಿಕ ಶ್ರಮ ವಿಭಜನೆಯನ್ನು ಒತ್ತಾಯಿಸುವಂತ ಭಾರತದ ಪ್ರಬಲ ಸಾಮಾಜಿಕ ರಚನೆಯನ್ನು ಮುನ್ನಡೆಸುವ ಪ್ರಮುಖ ಸಾಮಾಜಿಕ ಮೌಲ್ಯಗಳು ಮತ್ತು ನಂಬಿಕೆಯ ವ್ಯವಸ್ಥೆಗಳಲ್ಲಿ ಸ್ಪಷ್ಟವಾಗಿ ಅಭಿವ್ಯಕ್ತವಾಗಿದೆ.

ಮೇಲ್ನೋಟಕ್ಕೆ, ಭಾರತದಲ್ಲಿ ಈ ವಾದ ಸ್ಥೂಲ (macro), ಮಧ್ಯಸ್ಥ (meso) ಮತ್ತು ಸೂಕ್ಷ್ಮ (micro) ಸ್ತರಗಳಲ್ಲಿ ಸ್ವೀಕಾರಾರ್ಹ ಎಂದು ಹೇಳಬಹುದಾಗಿದೆ. ಬಾಲ ಕಾರ್ಮಿಕತೆ ವಿಷಯದೊಂದಿಗೆ ತೊಡಗಿಸಿಕೊಂಡವರಿಗೆ ಇಂತಹ ವರ್ಗಾಧಾರಿತ ಧೋರಣೆಗಳನ್ನು ನಿರೂಪಿಸುವ ವೈಯಕ್ತಿಕ ಮುಖಾಮುಖಿಗಳು ಅವರ ದಿನನಿತ್ಯದ ಅನುಭವಗಳಾಗಿರುತ್ತವೆ. ಈ ಮುಖಾಮುಖಿಯಂತಹ ಅನುಭವಗಳು ಅಧಿಕಾರಿಗಳು, ಕೈಗಾರಿಕ ಮತ್ತು ಅಸಾಂಪ್ರದಾಯಿಕ ಕ್ಷೇತ್ರದಲ್ಲಿನ ಉದ್ಯೋಗದಾತರಲ್ಲದೆ ನೆರೆಹೊರೆಯಲ್ಲಿನ ಗೃಹಕಾರ್ಮಿಕರ ಮಾಲಿಕರೊಂದಿಗೆ ಆಗಿರುವುದನ್ನು ಒಳಗೊಂಡಿರುತ್ತದೆ. ಇದನ್ನು ನೀತಿಗಳ ಮೂಲ ರಚನಕಾರರಾಗಿರುವ ಮಧ್ಯಮವರ್ಗದ ಆಡಳಿತಶಾಹಿಯು ಇನ್ನಷ್ಟು ಬಲಗೊಳಿಸುತ್ತದೆ. ಅದಲ್ಲದೆ, ಬೇರೆ ದೇಶಗಳೊಂದಿಗಿನ ತುಲನಾತ್ಮಕ ದೃಷ್ಟಿಕೋನದಿಂದ ಗ್ರಹಿಸಬಹುದಾದ ಅಂಶವೇನೆಂದರೆ ಅದು ಬಾಲ್ಯದ ಕುರಿತಂತೆ ಒಂದು ಸಮಾನತೆಯ ಪರಿಕಲ್ಪನೆಯೆಡೆಗೆ ಯಾವುದೇ ಪ್ರಗತಿಶೀಲ ಕ್ರಮ ತೆಗೆದುಕೊಳ್ಳುವುದನ್ನು ಅಡ್ಡಿಪಡಿಸುವುದು ಸಂಪನ್ಮೂಲದ ಬಿಕ್ಕಟ್ಟಾಗಲಿ ಅಥವಾ ಸ್ವಾಹಿತಾಸಕ್ತ ಗುಂಪುಗಳಿಂದ ಅನುಭವಿಸುವ ಒತ್ತಡವಲ್ಲ, ಬದಲಿಗೆ ಸ್ಥಳೀಯ ಆಡಳಿತಶಾಹಿಯ ನಂಬಿಕೆಯ ವ್ಯವಸ್ಥೆಗಳು ಎಂಬುದು. ಶಾಲಾಶಿಕ್ಷಣಕ್ಕೆ ತಳಕುಹಾಕಿದ ಬಾಲ್ಯಾವಸ್ಥೆ ಮತ್ತು ವಿಶಾಲ ಸಮಾಜವು ಮಕ್ಕಳಿಗೆ ಒದಗಿಸಲು ನೈತಿಕವಾಗಿ ಬಾಧ್ಯಸ್ಥವಾಗಿರುವ ಇತರ ಸಂರಕ್ಷಣಾತ್ಮಕ ಕ್ರಮಗಳಿಗೆ ಸಂಬಂಧಿಸಿದಂತೆ ಸಂಪೂರ್ಣ ಒಮ್ಮತವಿದೆಯಾದರೂ, ಔಪಚಾರಿಕ ಅಥವಾ ಔಪಚಾರಿಕವಲ್ಲದ ಕಾರ್ಯಪಡೆಯಲ್ಲಿ ಸೇರಿರುವ ಮಕ್ಕಳು ಸಮಾಜದಿಂದಾಗಲೀ ಅಥವಾ ಪ್ರಭುತ್ವದಿಂದಾಗಲೀ ಇಂತಹ ಯಾವುದೇ ನಿಬಂಧನೆಗಳನ್ನು ಪಡೆಯಲು ಅರ್ಹರಾಗುವುದಿಲ್ಲ. ಅಂತಹದೊಂದು ವರ್ಗ ಪೂರ್ವಾಗ್ರಹವು ಸಮಾಜದ ಕೆಳಸ್ತರದಲ್ಲಿರುವ ಮಕ್ಕಳು ಅವರ ಬಾಲ್ಯದಲ್ಲಿ ಪಡೆದುಕೊಳ್ಳಲು ಅರ್ಹರು ಎಂಬ ವಿಷಯ ಕುರಿತಂತೆ ಹೆಚ್ಚಿನದಾಗಿ ಶಿಕ್ಷಣ, ಆಹಾರಕ್ಕೆ, ಮತ್ತು ಮುಖ್ಯವಾಗಿ ವಿರಾಮ ಮತ್ತು ಮನರಂಜನೆಗೆ ಸಂಬಂಧಿಸಿದೆ. ವಿವಿಧ ಸರ್ಕಾರ ಇಲಾಖೆಗಳು ಹಾಗೂ ಕಾರ್ಯಕ್ರಮಗಳ ಮೂಲಕ ಶಾಲೆವ್ಯವಸ್ಥೆಯಿಂದ ಹೊರಗುಳಿದು ಮತ್ತು ಕೆಲಸದಲ್ಲಿರುವ ಮಕ್ಕಳನ್ನು ತಲುಪಲು ಪ್ರಯತ್ನಿಸುವ ಪ್ರಭುತ್ವದ ಮಧ್ಯಪ್ರವೇಶಿಕೆಗಳು ಕೂಡ ಮಕ್ಕಳ ಕುರಿತಂತಿರುವ ಈ ವ್ಯತ್ಯಾಸದ ಹಕ್ಕುಗಳಿಂದ ಬಾಧಿತವಾಗಿವೆ. ಇಂತಹ ಕಾರ್ಯಕ್ರಮಗಳ ಮುಖ್ಯ ಅಂಶಗಳು ವಿಧ್ಯುಕ್ತವಲ್ಲದ ಶಿಕ್ಷಣ ಮತ್ತು ಔದ್ಯೋಗಿಕ ತರಬೇತಿಗಳಾಗಿವೆ ಮತ್ತು ಇವೆರಡನ್ನೂ ಅವುಗಳ ಕಳಪೆ ಸ್ವರೂಪಕ್ಕೆ ಮತ್ತು ಅವು ಯಾವುದೇ ರೀತಿಯಲ್ಲಿ ಸಾಮಾಜಿಕ ಮುನ್ನಡೆಯನ್ನು ಸಾಧ್ಯವಾಗಿಸುವುದಿಲ್ಲ ಎಂಬ ಕಾರಣಕ್ಕೆ ಟೀಕಿಸಲಾಗಿವೆ. ಆದರೆ ನಾವು

ಗಮನದಲ್ಲಿರಿಸಿಕೊಳ್ಳಬೇಕಾದುದೇನೆಂದರೆ, ಇಂತಹ ಅನುಭವಗಳನ್ನು ಹಂಚಿಕೊಳ್ಳುವುದು ಮತ್ತು ವಾದಗಳು ಪ್ರಗತಿ ಅಸಾಧ್ಯವೆಂಬ ಭಾವನೆಯನ್ನು ನಮ್ಮಲ್ಲಿ ಉಂಟಮಾಡುತ್ತದೆ ಅಲ್ಲದೆ ಕೆಲವು ಕಾರ್ಯರೀತಿಗಳನ್ನು ಮತ್ತು ನಂಬಿಕೆಗಳನ್ನು ಬದಲಾಯಿಸಲು ಸಾಧ್ಯವೇ ಇಲ್ಲ ಎಂಬ ಧೋರಣೆಯನ್ನು ಅನುಮೋದಿಸುತ್ತವೆ.

## III

ಪ್ರಭುತ್ವದ ಈ ಬಾಲ್ಯ ಪರಿಕಲ್ಪನೆಯಲ್ಲಿ ಅಂತರ್ಗತವಾಗಿರುವ ವರ್ಗ ಪೂರ್ವಾಗ್ರಹಗಳನ್ನು ಹೊರತುಪಡಿಸಿ, ಮಕ್ಕಳ ಜೀವನದಲ್ಲಿ ಕೆಲಸ ಮತ್ತು ಶಿಕ್ಷಣದ ನಡುವಿನ ವೈವಿಧ್ಯವುಳ್ಳ ಸಂಬಂಧಗಳಿಂದ ಹೊರಡುವ ಅನೇಕ ಸೂಚ್ಯಪರಿಣಾಮಗಳನ್ನು ಸಹ ವಿಶದೀಕರಿಸಬೇಕಾಗುತ್ತದೆ. ಶಾಲೆಗೆ ಹೋಗುವ ಮಕ್ಕಳು ಮತ್ತು ಕೆಲಸಕ್ಕೆ ಹೋಗುವ ಮಕ್ಕಳು ಎಂಬ ಸರಳ ದ್ವಂದ್ವ ವರ್ಗೀಕರಣದಾಚೆಗೂ ಪೂರ್ಣಾವಧಿ ಶಿಕ್ಷಣ ಪಡೆಯುತ್ತಿರುವ ಮಕ್ಕಳು, ಪೂರ್ಣಾವಧಿ ಕೆಲಸ ಮಾಡುತ್ತಿರುವ ಮಕ್ಕಳು, ಶಾಲೆಗೂ ಹೋಗದ ಕೆಲಸಕ್ಕೂ ಹೋಗದ ಮಕ್ಕಳು, ಕೆಲವು ಸಂದರ್ಭಗಳಲ್ಲಿ ಮಾತ್ರ ಹಾಗೂ ಕಾಲೋಚಿತ ಕೆಲಸದಲ್ಲಿ ತೊಡಗಿಕೊಂಡಿರುವ ಮಕ್ಕಳು ಮತ್ತು ಶಾಲೆಗೆ ಹೋಗುತ್ತಲೇ ದುಡಿಯುತ್ತಿರುವ ಮಕ್ಕಳು - ಹೀಗೆ ಒಂದು ಹೆಚ್ಚು ಸಂಕೀರ್ಣ ಮತ್ತು ವೈವಿಧ್ಯಮಯ ಪ್ರವರ್ಗಗಳಿವೆ ಎಂಬುದನ್ನು ಮಕ್ಕಳ ಬದುಕಿನಿಂದ ಸಂಗ್ರಹಿಸಿದ ಪುರಾವೆಗಳು ತಿಳಿಸುತ್ತವೆ. ಆದಾಗ್ಯೂ, ಇವು ಕೂಡ ಪರಸ್ಪರ ಪ್ರತ್ಯೇಕವಾದ ಪ್ರವರ್ಗಗಳಲ್ಲ. ಸಮಸ್ಯೆಯ ಸಂಕೀರ್ಣತೆಯು ಬಾಲ ಕಾರ್ಮಿಕರ ಹೆತ್ತವರ ಕಥನಗಳಿಂದ ಸ್ಪಷ್ಟವಾಗಿ ಗೋಚರವಾಗುತ್ತದೆ, ಮತ್ತು ಹಲವಾರು ಗ್ರಾಮಾಧ್ಯಯನಗಳಿಂದಲೂ ಸಹ ಅರ್ಥಮಾಡಿಕೊಳ್ಳಬಹುದಾಗಿದೆ. ಒಟ್ಟಿನಲ್ಲಿ, ಬಡ ಮಕ್ಕಳ ಜೀವನದಲ್ಲಿ ಕೆಲಸ ಇಲ್ಲದೆ ಇರುವುದಿಲ್ಲ ಎಂಬುದನ್ನು ನಾವು ಅರಿತುಕೊಳ್ಳುತ್ತೇವೆ.

ಬಹುಸಂಖ್ಯಾತರಿಗೆ ಬಾಲ್ಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಕಲ್ಪನೆಯು ಏನೆಂದರೆ ಅದು ದೊಡ್ಡವರ ಜಗತ್ತಿನಲ್ಲಿ ಕ್ರಮೇಣವಾಗಿ ತೊಡಗಿಸಿಕೊಳ್ಳುವುದು ಎನ್ನುವುದಾಗಿದೆ. ಮನೆತನಗಳ/ಸಮುದಾಯಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನಗಳಿಗನುಗುಣವಾಗಿ ಈ ತೊಡಗಿಸಿಕೊಳ್ಳುವಿಕೆಯ ಸ್ವರೂಪವು ಬದಲಾಗುತ್ತದೆ. ಆರ್ಥಿಕತೆಯ ಶ್ರೇಣಿಯಲ್ಲಿ ಅತ್ಯಂತ ತಳಮಟ್ಟದಲ್ಲಿರುವವರಲ್ಲಿ ತೊಡಗಿಸಿಕೊಳ್ಳುವಿಕೆಯು ಆರಂಭಿಕ ಹಂತಗಳಲ್ಲಿಯೇ ಪ್ರಾರಂಭವಾಗುತ್ತದೆ – ಐದು ವರ್ಷದ ಮಗುವಿಗೆ ಅದರ ಒಡಹುಟ್ಟಿದವರನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಕೊಡಲಾಗಿರುತ್ತದೆ, ಆರು ವರ್ಷದ ಮಗುವಿಗೆ ನೀರು ತರುವ ಮತ್ತು ಉರುವಲು ತರುವ ಕಾರ್ಯವನ್ನು ವಹಿಸಲಾಗಿರುತ್ತದೆ, ಇತ್ಯಾದಿ. ಇಂತಹ ಮನೆತನಗಳಲ್ಲಿ ಮಕ್ಕಳು ಹೆಚ್ಚಾಗಿ ಮಹಿಳೆಯರ ಲಿಂಗಾಧಾರಿತ ಕೆಲಸದ ಜವಾಬ್ದಾರಿಗಳನ್ನು ಹಂಚಿಕೊಂಡಿರುತ್ತಾರೆ. ಹೆಣ್ಣು ಮಕ್ಕಳ ವಿಷಯದಲ್ಲಂತೂ ಇದು ಹೆಚ್ಚಿನಮಟ್ಟಿಗೆ ನಡೆಯುವ ಸಂಗತಿ. ಸ್ವಲ್ಪ ದೊಡ್ಡ ಮಕ್ಕಳನ್ನು ಪ್ರಾಣಿಗಳನ್ನು ನೋಡಿಕೊಳ್ಳುವಂತ ಚಟುವಟಿಕೆಗಳಲ್ಲಿ ಮತ್ತು ಕೌಟುಂಬಿಕ ಉದ್ಯಮಗಳು ಬೇಡುವ ಪೂರಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಸ್ಥೂಲ ಮತ್ತು ಸೂಕ್ಷ್ಮ ಎರಡೂ ಮಟ್ಟದಲ್ಲಿನ ಪುರಾವೆಗಳನ್ನು ನೋಡಿದಾಗ ಅವು ಸ್ಪಷ್ಟವಾಗಿ ಬಾಲ ಕಾರ್ಮಿಕತೆ ಎಂದು ಯಾವುದನ್ನು ಸಾಮಾನ್ಯವಾಗಿ ಕರೆಯಬಹುದಾಗಿದೆಯೋ ಅದು 5-9 ವಯೋಮಾನದ ಮಕ್ಕಳಲ್ಲಿರುವುದಕ್ಕಿಂತ ಹೆಚ್ಚಾಗಿ 10-14 ವಯೋಮಾನದ ಮಕ್ಕಳಲ್ಲಿ ದೊಡ್ಡಮಟ್ಟದಲ್ಲಿ ಕಾಣಬಹುದಾಗಿದೆ ಎಂದು ಸೂಚಿಸುತ್ತದೆ.

ಮಕ್ಕಳ ಕೆಲಸ ಕುರಿತಾದ ವಿಶ್ಲೇಷಣೆಯಲ್ಲಿ ಕುತೂಹಲ ಕೆರಳಿಸುವ ಸಂಗತಿಯೇನೆಂದರೆ ಶಾಲೆಯಲ್ಲಿ ದಾಖಲಾತಿಯಾದವರು ಅಥವಾ ಶಾಲೆಗೆ ಹೋಗುತ್ತಿರುವವರು ಕೆಲಸಗಳಲ್ಲಿ ತೊಡಗಿದ್ದರೆ ಅದನ್ನು ಕೆಲಸವೆಂದು ಪರಿಗಣಿಸುವುದಿಲ್ಲ, ಆದರೆ ಶಾಲಾವ್ಯವಸ್ಥೆಯಿಂದ ಹೊರಗುಳಿದ ಮಕ್ಕಳು ಅದೇ ಕೆಲಸದಲ್ಲಿ ತೊಡಗಿದ್ದರೆ ಅದನ್ನು ಕೆಲಸವೆಂದು ಪರಿಣಿಸಲಾಗುತ್ತದೆ. ಮಕ್ಕಳ ಬದುಕಿನಲ್ಲಿನ ಕೆಲಸ/ಶಿಕ್ಷಣದ ಪ್ರಬಲ ದ್ವಂದ್ವಾತ್ಮಕ ಚೌಕಟ್ಟು ಈ ಲೋಪಕ್ಕೆ ಮೂಲಭೂತ ಕಾರಣವಾಗಿರುವುದು ಇತರ ಹಲವು ತಪ್ಪುಕಲ್ಪನೆಗಳಿಗೆ ದಾರಿ ಮಾಡಿಕೊಟ್ಟಿದೆ. ಮೊದಲನೆಯದಾಗಿ, ಶಿಕ್ಷಣವು ಕೆಲವು ಮಕ್ಕಳಿಗೆ ಮಾತ್ರ ಸಿಗುವ ವಿಶೇಷ ಸವಲತ್ತು ಮತ್ತು ಕೆಲಸ ಇನ್ನು ಕೆಲವರ ಹಣೆಬರಹದ ಕಸಬು ಎಂಬ ವರ್ಗಾಧಾರಿತ ಬಾಲ್ಯದ ಪರಿಕಲ್ಪನೆಯನ್ನು ದೃಢೀಕರಿಸುತ್ತದೆ. ಅಲ್ಲದೆ, ಭಾರತದ

ಸಂದರ್ಭದಲ್ಲಿ (ಜಗತ್ತಿನ ಹೆಚ್ಚಿನ ಭಾಗಗಳಲ್ಲಿ ಕೂಡ) ಸರಳವಾಗಿ ದೊಡ್ಡವರ ಚಟುವಟಿಕೆಗಳು ಎಂದು ವ್ಯಾಖ್ಯಾನಿಸಲಾಗುವ ಕೆಲಸ ಇಲ್ಲದ ಬಾಲ್ಯದ ಪರಿಕಲ್ಪನೆಯ ರಚನೆಯು ಅವಾಸ್ತವಿಕವಾಗಿದ್ದು ಅದು ಬಾಲ್ಯದ ಅರ್ಥೈಸುವಿಕೆಯನ್ನು ಸವಲತ್ತುವುಳ್ಳ ಮಕ್ಕಳ ಒಂದು ಅಲ್ಪಸಂಖ್ಯೆಯ ಗುಂಪಿಗೆ ಸೀಮಿತಗೊಳಿಸುತ್ತದೆ. ಇದು ಬಾಲ್ಯದ ರಮ್ಯೀಕರಿಸಿದ ಪಾಶ್ಚಾತ್ಯ ಕಲ್ಪನೆಯನ್ನು ಹೋಲುತ್ತದೆ ಅಥವಾ ಅದರ ಪರಿಣಾಮವೇ ಆಗಿರಬಹುದು.

ಗ್ರಾಮೀಣ ಪ್ರದೇಶಗಳಲ್ಲಿ ಜೀವನವು ಮತ್ತು ನಗರ ಹಾಗೂ ಗ್ರಾಮೀಣ ಪ್ರದೇಶಗಳೆರಡರಲ್ಲಿಯೂ ಬಡ ವರ್ಗದವರ ಜೀವನವು ಒಂದು ಮಾದರಿನ್ನು ತೋರಿಸುತ್ತದೆ. ಈ ಮಾದರಿಯಲ್ಲಿ ನಾವು ದೊಡ್ಡವರ ಜಗತ್ತು ಸಾಕಷ್ಟು ನೆರವನ್ನು ಮಕ್ಕಳಿಂದ ಪಡೆದುಕೊಳ್ಳುತ್ತದೆ ಎಂಬುದನ್ನು ಗಮನಿಸಬಹುದಾಗಿದೆ. ಈ ಲೋಕದೃಷ್ಟಿಯಲ್ಲಿ ಮಕ್ಕಳಿಂದ ಬೆಂಬಲ ನಿರೀಕ್ಷಿಸುವುದನ್ನು ಪಾಲನೆಯ ಭಾಗವೆಂದು ಹೆತ್ತವರಿಗೆ ಬೆಂಬಲ ನೀಡುವುದು ಬೆಳೆದು ದೊಡ್ಡವರಾಗುವುದರ ಭಾಗವೆಂದು ಭಾವಿಸಲಾಗತ್ತದೆ. ಆರ್ಥಿಕ ಬಡತನವಿಲ್ಲದಿದ್ದರೂ ಹಲವಾರು ಕರಕುಶಲ ಕಲೆಗಳ ಕುಟುಂಬಗಳಲ್ಲಿ ಮತ್ತು ಕೃಷಿಕ ಮನೆತನಗಳಲ್ಲಿ ಬಾಲ ಕಾರ್ಮಿಕತೆ ಪ್ರಚಲಿತವಾಗಿರುವುದು ಈ ಲೋಕದೃಷ್ಟಿಯ ಸ್ಪಷ್ಟ ಉದಾಹರಣೆಗಳಾಗಿವೆ. ದೇಶದಲ್ಲಿ ಜನಸಂಖ್ಯಾ ಸ್ಫೋಟದ ಕುರಿತಾದ ಮಾತುಕತೆಗಳು ನೀತಿ ನಿರೂಪಣೆಗಳ ಚರ್ಚೆಗಳಲ್ಲಿ ಪ್ರಧಾನ ವಿಷಯವಾಗಿದ್ದ ಕಾಲಘಟ್ಟದಲ್ಲಿ ಬಾಲ್ಯ ಮತ್ತು ದೊಡ್ಡವರ ಜಗತ್ತಿನ ನಡುವಿದ್ದ ಈ ಸಹಜೀವನ ಸಂಬಂಧ ನಮಗೆ ಹೆಚ್ಚು ಪರಿಚಿತವಾಗಿದ್ದು ಅದು ದೊಡ್ಡವರನ್ನು ಸಂಪೂರ್ಣವಾಗಿ ಆಶ್ರಯಿಸುವುದು ಎಂದಿರುವ ಇಂದಿನ ಬಾಲ್ಯದ ಪರಿಕಲ್ಪನೆಗೆ ತದ್ವಿರುದ್ಧವಾಗಿದೆ. ಜನಸಂಖ್ಯಾ ಸ್ಥಿತಿಗತಿಯ ಪರಿವರ್ತನೆಯನ್ನು ನಿಧಾನಗೊಳಿಸಿದ 'ಹೆಚ್ಚಿನ ಕೈಗಳು' ಎಂಬ ಚಿಂತನೆಯನ್ನು ಉದ್ದೇಶಿಸಲಾಗುತ್ತಿದೆಯಾದರೆ ಸಂಸ್ಕೃತಿಯು ಹೊಂದಿರುವ ಪರಿಕಲ್ಪನೆ ಮತ್ತು ಮಕ್ಕಳನ್ನು ಹೊಂದಿರುವುದರ ಕುರಿತಾದ ಲೋಕದೃಷ್ಟಿ ಹಾಗೆಯೇ ಉಳಿದಿದೆ. ಮಕ್ಕಳನ್ನು ಸಾಕುವುದರ ಮಟ್ಟಿಗೆ ಆಧುನಿಕತೆಯು ಒದಗಿಸುವ ಹೊಸ ಲೋಕದೃಷ್ಟಿಯು ಪ್ರಭಾವಿಸದ ಹೊರತು, ಮಕ್ಕಳನ್ನು ಸಾಕುವ ವಿಷಯಕ್ಕೆ ಸಂಬಂಧಿಸಿದಂತೆ ಇರುವ ಸಮುದಾಯದ ಸಾಮೂಹಿಕ ಜ್ಞಾನದ ಹಿಡಿತವೇ ಹೆಚ್ಚು ಬಲವಾಗಿರುತ್ತದೆ. ಹಾಗಾಗಿ, ಬಡ ಕುಟುಂಬಗಳ ಮಟ್ಟಿಗೆ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿರಲಿ ಇಲ್ಲದಿರಲಿ, ಅವರು ಹೆಚ್ಚು ಉತ್ಪಾದಕವಲ್ಲದ ಮತ್ತು ಶ್ರಮ-ಆಧಾರಿತ ಕೆಲಸಗಳಲ್ಲಿ ತೊಡಗಿಕೊಂಡಿರುವ ದೊಡ್ಡವರ 'ಹೆಚ್ಚುವರಿ ಕೈಗಳಾಗಿರುತ್ತಾರೆ'. ಇತರ ವರ್ಗ ಗುಂಪುಗಳಲ್ಲಿ ಮಕ್ಕಳಿಗೆ ಕೆಲಸ ವಹಿಸುವುದೇ ಇಲ್ಲ ಎಂದು ಹೇಳಲು ಬರುವುದಿಲ್ಲವಾದರೂ, ಅದು ಕೌಟುಂಬಿಕ ರಚನೆಯಿಂದ ನಿಷ್ಪನ್ನವಾದ ಭಾಗವಾಗಿ ಕಾರ್ಯನಿರ್ವಹಿಸುತ್ತದೆ, ಕುಟುಂಬದ ಮುಖ್ಯ ಆರ್ಥಿಕ ಚಟುವಟಿಕೆಗಳು ದೊಡ್ಡವರಿಗೆ ಮತ್ತು ಗೃಹ ಕೆಲಸಗಳು ಬೇಡುವ ಪೂರಕ ಕೆಲಸಗಳನ್ನು ಮಕ್ಕಳಿಗೆ ನಿಯೋಜಿಸಲಾಗುತ್ತದೆ.

ವಿಷಯ ಹೀಗಿರುವಾಗ, ಬಾಲ ಕಾರ್ಮಿಕರು ಮತ್ತು ಕೆಲಸದಲ್ಲಿ ತೊಡಗಿರುವ ಮಕ್ಕಳು ಎಂಬ ಸೈದ್ಧಾಂತಿಕ ವ್ಯತ್ಯಾಸಗಳ ಕುರಿತು ನಮ್ಮ ಪರಸ್ಪರ ವಿರೋಧವಾಗಿರುವ ದೃಷ್ಟಿಕೋನಗಳನ್ನು ನಾವು ಮರುಚಿಂತಿಸಬೇಕಾಗಿದೆ. ಅವರು ವೇತನ ಪಡೆದು ಅಥವಾ ಪಡೆಯದೆ ಕೆಲಸ ಮಾಡುತ್ತಿರಲಿ, ಮನೆಗಳಲ್ಲಿ ಅಥವಾ ಕೃಷಿ ತೋಟಗಳಲ್ಲಿ ಕೆಲಸ ಮಾಡುತ್ತಿರಲಿ ಅಥವಾ ಮನೆಯ ಹೊರಗೆ ಕೆಲಸ ಮಾಡುತ್ತಿರಲಿ, ಶಿಕ್ಷಣವಿಲ್ಲದ ಬಾಲ್ಯ ಅಪೂರ್ಣವೆಂದು ಪರಿಕಲ್ಪಿಸಲಾಗಿದ್ದರೂ ಸಹ, ಬಾಲ್ಯದ ಅನುಭವದಿಂದ ವಂಚಿತರಾಗಿದ್ದಾರೆ ಅಥವಾ ಬಾಲ್ಯದ ಅನುಭವಕ್ಕೆ ವ್ಯತ್ಯಾಸಮಾಡಿದ ಹಕ್ಕನ್ನು ಹೊಂದಿದ್ದಾರೆ ಎಂಬುದು ಇಲ್ಲಿ ಮುಖ್ಯ ವಿಷಯವಾಗಿದೆ. ಬಾಲ್ಯದ ವಿವಿಧ ಹಂತಗಳಲ್ಲಿ ಮಕ್ಕಳು ದಾಟಿಬರಬೇಕಾದ ಪ್ರಮುಖ ಘಟ್ಟಗಳಾದ ಸಾಮಾಜಿಕ ಬೆಳವಣಿಗೆ, ಸ್ನಾಯುಚಲನ ಕೌಶಲದ ಬೆಳವಣಿಗೆ ಮತ್ತು ಮನಃ ಸಂಬಂಧಿ ಬೆಳವಣಿಗೆಯ ಘಟ್ಟಗಳಂತೆ ಶಿಕ್ಷಣವೂ ಎಲ್ಲಾ ಮಕ್ಕಳು ದಾಟಬೇಕಾದ ಪ್ರಮುಖ ಘಟ್ಟವೇ ಆಗಿದೆ. ಹಾಗಾಗಿ, ಅದು ಒಂದು ಜೀವನ ಕೌಶಲವೂ ಹೌದು ಮೂಲಭೂತ ಹಕ್ಕೂ ಹೌದು. ಆದ್ದರಿಂದ, ನೀತಿನಿರೂಪಣೆಯ ದೃಷ್ಟಿಕೋನದಿಂದ ಈ ಮಕ್ಕಳನ್ನು ಶಿಕ್ಷಣದಿಂದ ವಂಚಿತರು ಎಂದು ಗುರುತಿಸುವುದು ಮುಖ್ಯ ಮತ್ತು ಹಾಗಾಗಿ, ಅವರನ್ನು ಏಕರೂಪದ ಪ್ರವರ್ಗವೆಂದು ಪರಿಗಣಿಸಬೇಕಾಗಿದೆ.

ಆದಾಗ್ಯೂ, ಮಕ್ಕಳು ತಮ್ಮ ಮೂಲಭೂತ ಹಕ್ಕಿನಿಂದ ವಂಚಿತರಾಗುವ ರೀತಿ ವೈವಿಧ್ಯಮಯವಾಗಿದೆ. ಉದಾಹರಣೆಗೆ, ತಮ್ಮ ದೈಹಿಕ ಬೆಳವಣಿಗೆ ಮತ್ತು ಆರೋಗ್ಯಕ್ಕೆ ಅಪಾಯಕಾರಿಯಾದ ವೃತ್ತಿಗಳಲ್ಲಿ ತೊಡಗಿಕೊಳ್ಳುವ

ಮಕ್ಕಳು ಶಿಕ್ಷಣದಿಂದ ವಂಚಿತರಾಗುವುದು ಮಾತ್ರವಲ್ಲದೆ, ಸುರಕ್ಷಿತವಾದ ಭೌತಿಕ ವಾತಾವರಣದಲ್ಲಿ ಬೆಳೆಯುವ ಹಕ್ಕಿನಿಂದಲೂ ಸಹ ವಂಚಿತರಾಗುತ್ತಾರೆ. ಮತ್ತು, ಅಂತಹ ಬಹು ಮಟ್ಟದಲ್ಲಿ ಹಕ್ಕುಗಳಿಂದ ವಂಚಿತರಾಗುವುದನ್ನು ಉದ್ದೇಶಿಸಲು  ನಿರ್ದಿಷ್ಟ ಮಧ್ಯಪ್ರವೇಶಿಕೆಗಳನ್ನು ಗುರುತಿಸುವುದು ಅತ್ಯಗತ್ಯವಾಗಿದೆ. ಹೀಗೆ, ನಾವು ಮತ್ತೆ ಬಾಲ ಕಾರ್ಮಿಕರು/ಕೆಲಸ ಮಾಡುವ ಮಕ್ಕಳು ಎಂಬ ದ್ವಂದ್ವಕ್ಕೆ ಹಿಂತಿರುಗುತ್ತೇವೆ. ಮಕ್ಕಳನ್ನು ಅವರ ಕೆಲಸದ ಸ್ಥಿತಿಗೆ ಅನುಗುಣವಾಗಿ ನೀತಿನಿರೂಪಣೆಯ ಮಾರ್ಗಸೂಚಿಗಳು ಅಪಾಯಕಾರಿ ಕೈಗಾರಿಕೆಗಳಲ್ಲಿ ದುಡಿಯುವವರು ಮತ್ತು ಒಪ್ಪಿಕೊಳ್ಳಬಹುದಾದ ಕೈಗಾರಿಕೆಗಳಲ್ಲಿ ದುಡಿಯುವವರು ಎಂದು ವರ್ಗೀಕರಿಸುವುದು ಕಾರ್ಯಯೋಜನೆಯ ಆದ್ಯತೆಗಳನ್ನು ಒದಗಿಸಬಹುದಾದರೂ, ಅವು ಮೂಲಭೂತ ಹಕ್ಕಾಗಿರುವ ಶಿಕ್ಷಣದಿಂದ ವಂಚಿತವಾಗುವುದನ್ನು ಸಮರ್ಥಿಸುವ ಅಪಾಯವಿದೆ.

ಆದಾಗ್ಯೂ, ಮಕ್ಕಳು ಶಾಲೆಯಿಂದ ಹೊರಗುಳಿದು ಕೆಲಸ ಮಾಡುತ್ತಿದ್ದರೆ, ಅವರ ನೇರ ಸಾಮಾಜಿಕ ಜಗತ್ತಿನಲ್ಲಿ ಹಲವಾರು ಅಂಶಗಳು ಕಾರ್ಯನಿರ್ವಹಿಸುತ್ತಿರುತ್ತವೆ ಎನ್ನುವುದು ನಮಗೆ ತಿಳಿದಿದೆ. ಅವರ ನೇರ ಸಾಮಾಜಿಕ ಪ್ರಪಂಚವು ಅವರ ಕುಟುಂಬ, ಅವರು ಸೇರಿರುವ ಮತ್ತು ವಾಸಿಸುವ ಸಮುದಾಯ, ನೆರೆಹೊರೆಯಲ್ಲಿರುವ ಶಿಕ್ಷಣ ಸಂಸ್ಥೆಗಳು ಮತ್ತು ಕಾರ್ಮಿಕ ಮಾರುಕಟ್ಟೆ,  ಹಾಗೂ ಶಿಕ್ಷಣ ಮತ್ತು ಉದ್ಯೋಗಕ್ಕೆ ಸಂಬಂಧಿಸಿದ ಪ್ರಭುತ್ವದ ನೀತಿಗಳನ್ನು ಒಳಗೊಂಡಿದೆ. ಒಂದು ಕುಟುಂಬವು ತೆಗೆದುಕೊಳ್ಳುವ ನಿರ್ಧಾರವು ಅದರ ಸದಸ್ಯರ ತರ್ಕಬದ್ಧ ಆಯ್ಕೆ ಆಗಿರುವುದಿಲ್ಲ, ಬದಲಿಗೆ ಅದು ಹೆಚ್ಚಾಗಿ ಸಾಮಾಜಿಕ ಆಯ್ಕೆಯಾಗಿರುತ್ತದೆ. ಒಂದು ಬಡ ಕುಟುಂಬವು ತನ್ನ ಒಂದು ಮಗುವನ್ನು ಅಥವಾ ಎಲ್ಲಾ ಮಕ್ಕಳನ್ನು 'ಶಿಕ್ಷಣ' ದ ವ್ಯವಸ್ಥೆಯಿಂದ ಹೊರಗಿಡುವುದನ್ನು ಆಯ್ಕೆ ಮಾಡಿಕೊಂಡರೆ, ಆ ಕುಟುಂಬದ ಸಾಮಾಜಿಕ ವಾಸ್ತವದ ಆಧಾರದ ಮೇಲೆ ಈ ನಿರ್ಧಾರವನ್ನು ಸಂದರ್ಭೋಚಿತವಾಗಿ ನೋಡುವುದು ಅತ್ಯಗತ್ಯ. ಒಂದು ಸಮುದಾಯದ ಸಾಮಾಜಿಕ ಹೊರಗಿಡುವಿಕೆಯು ಶಿಕ್ಷಣವನ್ನು ಸವಲತ್ತುವುಳ್ಳ ಸಮುದಾಯಗಳು  ಆಯ್ಕೆಮಾಡಿಕೊಳ್ಳುವ ವಿಷಯವನ್ನಾಗಿಸುತ್ತದೆ, ಉದಾಹರಣೆಗೆ ಒಂದು ಹೆಚ್ಚು ದೊಡ್ಡದಾದಂತಹ ಮನೆಯ ಆಯ್ಕೆ. ಮತ್ತು, ತಮ್ಮ ಸಾಂಪ್ರದಾಯಿಕ ಉದ್ಯೋಗದಿಂದ ಹೊರಬರದಂತಹ ಹೆಚ್ಚಿನ ಈ ಸಮುದಾಯಗಳಿಗೆ ಶಿಕ್ಷಣವು ಯಾವುದೇ ಅವಕಾಶ ಒದಗಿಸುವ ಸೂಚನೆ ನೀಡುವುದಿಲ್ಲ ಎಂಬುದು ಸಾಮಾಜಿಕ ವಾಸ್ತವವಾಗಿದೆ. ಸ್ಪಷ್ಟವಾಗಿ, ಶಿಕ್ಷಣದ ಮೌಲ್ಯ ಮತ್ತು ಆಕಾಂಕ್ಷೆಗಳು ಇಂತಹ ವಾಸ್ತವಗಳಿಂದ ನಿರ್ಧರಿತವಾಗುತ್ತವೆ. ಹಾಗಾಗಿ, ಬಾಲ ಕಾರ್ಮಿಕತೆಯನ್ನು ಕುಟುಂಬಗಳು ಮಾಡುವ ಒಂದು ಆಯ್ಕೆ ಎಂದು ಪರಿಗಣಿಸುವುದು ಆ ಮನೆತನಗಳು ಅನುಭವಿಸುವ ಅಭಾವಗಳಿಗೆ ಕಾರಣವಾಗಿರುವ ವಿಶಾಲ ರಚನೆಯನ್ನು ನಿರ್ಲಕ್ಷಿಸುತ್ತದೆ. ಉದಾಹರಣೆಗೆ, ವಯಸ್ಕರ ಕನಿಷ್ಠ ವೇತನವನ್ನು ಅನುಷ್ಠಾನಗೊಳಿಸಿಲ್ಲ. ಹಾಗಿದ್ದರೆ ಬಾಲ ಕಾರ್ಮಿಕತೆಯನ್ನು ತೊಡೆದುಹಾಕಲು ಮಾಡುವ ಮಧ್ಯಪ್ರವೇಶಿಕೆಗಳು ಮಕ್ಕಳನ್ನು ಗುರಿಯಾಗಿಸಿಕೊಳ್ಳಬೇಕೆ, ಕುಟುಂಬವನ್ನು ಗುರಿಯಾಗಿಸಿಕೊಳ್ಳಬೇಕೆ ಅಥವಾ ಸಂಸ್ಥೆಗಳನ್ನು ಗುರಿಯಾಗಿಸಿಕೊಳ್ಳಬೇಕೆ? ಈ ಹೆಚ್ಚಿನ ಬಾಲ್ಯದ ಅಥವಾ ಕುಟುಂಬಗಳು ಹೊಂದಿರುವ ಅಭಾವಗಳು ಸಾಂಸ್ಥಿಕ ವೈಫಲ್ಯದಿಂದ ಹೊರಹೊಮ್ಮುವುದರಿಂದ, ಒಂದಕ್ಕಿಂತ ಇನ್ನೊಂದಕ್ಕೆ ಹೆಚ್ಚು ಆದ್ಯತೆ ಕೊಟ್ಟರೆ ಅದು ಮಧ್ಯಪ್ರವೇಶಿಕೆಗಳಿಗೆ ಸಂಬಂಧಿಸಿದಂತೆ *'ಒಂದಕ್ಕಿಂತ ಮತ್ತೊಂದು ಶ್ರೇಷ್ಠ'* ಎಂಬ ಮನೋಭಾವಕ್ಕೆ  ಮಾತ್ರ ಎಡೆಮಾಡಿಕೊಡುತ್ತದೆ.

ಹಲವು ಮಾದರಿಗಳ ಮಧ್ಯಪ್ರವೇಶಿಕೆಗಳು ವಿವಿಧ ಪ್ರಮಾಣದ ಯಶಸ್ಸಿನೊಂದಿಗೆ ಕಾರ್ಯರೂಪದಲ್ಲಿವೆ. ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳ ಈ ಕಾರ್ಯಕ್ರಮದ ಮಧ್ಯಪ್ರವೇಶಿಕೆಗಳಲ್ಲಿ ಗಾಢನಂಬಿಕೆ ಹೊಂದಿದ್ದರೂ ಸಹ, ಹೆಚ್ಚು ವಿಶಾಲವಾದ ನೀತಿನಿರೂಪಣೆಯ ಚೌಕಟ್ಟುಗಳಲ್ಲಿ ಬದಲಾವಣೆಗಳು ಆಗದಿದ್ದಲ್ಲಿ, ಕಾರ್ಯಕ್ರಮದ ಮಧ್ಯಪ್ರವೇಶಿಕೆಗಳು ಸೂಕ್ಷ್ಮ ಮಟ್ಟದಲ್ಲಿ, ಅದೂ ಕೂಡ ಅಲ್ಪಾವಧಿಯಲ್ಲಿ ಮಾತ್ರ ಫಲಿತಾಂಶಗಳನ್ನು ಸಾಧಿಸಬಹುದು ಎಂಬುದನ್ನು ಗಮನದಲ್ಲಿಟ್ಟುಕೊಳ್ಳುವುದು ಮುಖ್ಯ. ಇದರಲ್ಲಿ ಪ್ರಭುತ್ವವು ದೊಡ್ಡ ಪಾತ್ರ ವಹಿಸುವಂತೆ ಒತ್ತಾಯಿಸಬೇಕಾಗಿದೆ. ಈ ಅವಕಾಶವಂಚಿತ ಮಕ್ಕಳನ್ನು ತಲುಪಲು ವ್ಯವಸ್ಥಾಪನೆಯ ಏರ್ಪಾಟುಗಳ ವಿಷಯದಲ್ಲಿ ಪ್ರಭುತ್ವದ ಅಸಾಮರ್ಥ್ಯತೆಯನ್ನು ಒಂದು ಕಾರಣವಾಗಿ ಸಾಮಾನ್ಯವಾಗಿ ಉಲ್ಲೇಖಿಸಲಾಗುತ್ತದೆ. ಆದರೆ ಇದು ಇಂದಿಗೆ ನಿಜವಲ್ಲ, ಏಕೆಂದರೆ ಸರ್ಕಾರ ದೃಢನಿರ್ಧಾರ ಮಾಡಿದಲ್ಲಿ ದೊಡ್ಡ ಪ್ರಮಾಣದ ಕಾರ್ಯಾಚರಣೆಗಳನ್ನು ಕೈಗೊಳ್ಳಲು

ಸಮರ್ಥವಾಗಿದೆ ಎನ್ನುವುದಕ್ಕೆ ಅದು ಯಶಸ್ವಿಯಾಗಿ ಕಾರ್ಯಗತಗೊಳಿಸಿರುವ ರೋಗನಿರೋಧಕ ಕಾರ್ಯಕ್ರಮಗಳೇ ಸಾಕ್ಷಿಗಳಾಗಿವೆ. ಒಂದು ಪ್ರಜಾಪ್ರಭುತ್ವ ರಾಜ್ಯವ್ಯವಸ್ಥೆಯಲ್ಲಿ ಮಕ್ಕಳು ಮತ ಬ್ಯಾಂಕುಗಳಾಗಿ ಇರುವುದಿಲ್ಲವಾದ್ದರಿಂದ, ಬಾಲ ಕಾರ್ಮಿಕತೆಯ ಸಮಸ್ಯೆಗಳನ್ನು ಉದ್ದೇಶಿಸುವಲ್ಲಿ ಸಕ್ರಿಯ ಪಾತ್ರ ವಹಿಸುತ್ತಿರುವವರು ಸೂಕ್ತ ರಾಜಕೀಯ ಮತ್ತು ನೀತಿನಿರೂಪಣೆಯ ವಲಯಗಳಲ್ಲಿ ಹೆಚ್ಚು ಹುರುಪಿನಿಂದ ನೀತಿ ಪ್ರತಿಪಾದನೆಯ ಹೆಚ್ಚುವರಿ ಪಾತ್ರವನ್ನು ವಹಿಸಬೇಕಾದ ಅಗತ್ಯವಿದೆ. ಮಕ್ಕಳು ಯಾವ ಪ್ರವರ್ಗಕ್ಕೂ ಸೇರದವರಾಗಿರಲಿ, ಒಪ್ಪಿಕೊಳ್ಳಬಹುದಾದ ಕೆಲಸಗಳಲ್ಲಿ ತೊಡಗಿಕೊಂಡಿರಲಿ, ಒಪ್ಪಿಕೊಳ್ಳಲಾಗದಂತಹ ಕೆಲಸಗಳಲ್ಲಿ ತೊಡಗಿಕೊಂಡಿರಲಿ ಅವು ಮಧ್ಯಪ್ರವೇಶಿಕೆಯ ಕಾರ್ಯಕ್ರಮಗಳ ಮತ್ತು ಸಂಸ್ಥೆಯ ಕಾರ್ಯಕ್ರಮಗಳ ಆಯ್ಕೆಯಾಗಬಹುದು. ಮಕ್ಕಳ ವರ್ಗೀಕರಣಕ್ಕಿಂತ ಮಕ್ಕಳು ಶಾಲೆಯಿಂದ ಹೊರಗುಳಿದಿದ್ದರೆ ಮತ್ತು ಭವಿಷ್ಯದಲ್ಲಿಯೂ ಹಾಗೆಯೆ ಹೊರಗುಳಿಯುತ್ತಾರೆ ಎಂಬ ವಾಸ್ತವಕ್ಕೆ ವಿಶೇಷ ಆದ್ಯತೆ ಕೊಡಬೇಕು, ಏಕೆಂದರೆ ನೀತಿನಿರೂಪಣೆಯ ಮಟ್ಟದಲ್ಲಿ ಬಾಲ್ಯದ ಕುರಿತು ಅಸ್ಪಷ್ಟತೆ ಇದ್ದರೆ ಅದು ಬಾಲ ಕಾರ್ಮಿಕತೆಯು ಹಾಗೆಯೇ ಉಳಿಯಲು ಕಾರಣವಾಗಬಹುದು.

ಕಡ್ಡಾಯ ಪ್ರಾಥಮಿಕ ಶಿಕ್ಷಣಕ್ಕಾಗಿ ಹಣ ಒದಗಿಸಲು ಹಿಂಜರಿಯುತ್ತಿರುವ ಸರ್ಕಾರದ ಬಗ್ಗೆ ನಾವು ಪ್ರಲಾಪಿಸುತ್ತಲೇ ಇದ್ದಿದ್ದೇವೆ. ಅದೇ ವೇಳೆ, ಕಳಪೆ ಮಾನವ ಅಭಿವೃದ್ಧಿ ಸೂಚಕಗಳನ್ನು ಮೂಲತಃ ಕಡಮೆ ಸಾಕ್ಷರತೆಯ ಮಟ್ಟದ ಆಧಾರದ ಮೇಲೆ ವಿವರಿಸಲಾಗುತ್ತಿದೆ ಎಂಬುದು ನಮಗೆ ತಿಳಿದಿದೆ. ಉದಾಹರಣೆಗೆ, ಎಮ್.ಎಮ್.ಆರ್ (MMR(Maternal Mortality Rate – ತಾಯಂದಿರ ಮರಣ ಪ್ರಮಾಣ), ಐ.ಎಮ್.ಆರ್ (IMR (Infant Mortality Rate –ಶಿಶು ಮರಣ ಪ್ರಮಾಣ) ಮತ್ತು ಫಲವತ್ತತೆ ಪ್ರಮಾಣದಂತಹ ಆರೋಗ್ಯ ಸ್ಥಿತಿ ಸೂಚಕಗಳು ಕೂಡ ಸಕಾರಾತ್ಮಕ ಸಹಸಂಬಂಧಗಳನ್ನು ಹೊಂದಿವೆ. ಲಿಂಗ ಸಂಬಂಧಿ ಅಭಿವೃದ್ಧಿ ಸೂಚಕಗಳ ವಿಷಯದಲ್ಲೂ ಹಾಗೆಯೇ. ಬಾಲ ಕಾರ್ಮಿಕತೆ ಕುರಿತಾದ ಅಧ್ಯಯನಗಳು, ಬಾಲ ಕಾರ್ಮಿಕತೆ ಹಾಗೂ ಮನೆಯ ಮುಖ್ಯಸ್ಥರ/ಹೆತ್ತವರ ಸಾಕ್ಷರತಾ ಮಟ್ಟದ ನಡುವೆ ವಿಲೋಮ ಸಂಬಂಧವಿದೆ ಎಂಬುದನ್ನು ಸರ್ವಾನುಮತದಿಂದ ಒತ್ತಿಹೇಳುವುದು ಸಹ ನಮಗೆ ತಿಳಿದಿದೆ. ಈ ಮೇಲಿನ ಎರಡು ಅವಲೋಕನಗಳಿಂದ ನಾವು ಗ್ರಹಿಸಬಹುದಾದುದೇನೆಂದರೆ ಒಂದು ಪೀಳಿಗೆಗೆ ಶಿಕ್ಷಣ ನೀಡುವ ಪ್ರಯತ್ನವು ಬಾಲ ಕಾರ್ಮಿಕತೆಯನ್ನು ಮತ್ತು ಹಿಂದುಳಿದಿರುವ ಇತರ ಅನೇಕ ಮಾನವ ಅಭಿವೃದ್ಧಿ ಸನ್ನಿವೇಶಗಳನ್ನು ತೊಡೆದುಹಾಕಬಹುದು ಎಂದು. ಕೊಥಾರಿ ಆಯೋಗ (Kothari Commision)ವು ಜಿ.ಡಿ.ಪಿ. (GDP) ಯ ಶೇಕಡಾ 6% ರಷ್ಟು ಕಡ್ಡಾಯ ಪ್ರಾಥಮಿಕ ಶಿಕ್ಷಣಕ್ಕೆ ಅಗತ್ಯವೆಂದು ಅಂದಾಜು ಮಾಡಿದ ಹೂಡಿಕೆಯು ದ್ವಿಗುಣಗೊಂಡಿರಬಹುದು, ಆದರೆ ನಾವಿಲ್ಲಿ ಭವಿಷ್ಯದಲ್ಲಿನ ಯಶಸ್ಸಿಗೆ ಪ್ರಾರಂಭಾನುಕೂಲತೆ ಹೊಂದುವಂತೆ ಒಂದು ಪೀಳಿಗೆಯನ್ನು ಸಾಕ್ಷರರನ್ನಾಗಿ ಮಾಡಲು 5-10 ವರ್ಷಗಳ ಕಲಾವಧಿಗೆ ಮಾತ್ರ ಸಾಕಾಗುವಷ್ಟು ಹೂಡಿಕೆಯ ಬಗ್ಗೆ ಮಾತನಾಡುತ್ತಿದ್ದೇವೆ. ರೋಗನಿರೋಧಕದ ವಿಷಯದಲ್ಲಿ ದೇಶವು ಈಗಾಗಲೇ ಅದನ್ನು ಮಾಡುತ್ತಿರುವುದರಿಂದ ಈ ಕಲ್ಪನೆಯು ನವೀನವೇನೂ ಅಲ್ಲ. ಈ ಶತಮಾನದಲ್ಲಿ ಜನಿಸಿದ ಮಕ್ಕಳಿಗೂ ನಾವು ಅದನ್ನೇ ಪುನರಾವರ್ತಿಸಬಹುದೇ - ಅವರೆಲ್ಲರೂ ಶಾಲೆಯಲ್ಲಿ ದಾಖಲಾಗುತ್ತಾರೆ ಎಂಬ ದೃಢನಂಬಿಕೆಯನ್ನು ಹೊಂದಬಹುದೆ?

ಪತ್ರವ್ಯವಹಾರಕ್ಕಾಗಿ ವಿಳಾಸ: piush_antony@yahoo.com

[ಲೇಖಕರು ವ್ಯಕ್ತಪಡಿಸಿದ ಅಭಿಪ್ರಾಯಗಳು ಅವರ ವೈಯಕ್ತಿಕ ಅಭಿಪ್ರಾಯಗಳು ಮತ್ತು ಅವು ಅವರ ಸಂಸ್ಥೆಗಳನ್ನು ಪ್ರತಿನಿಧಿಸುವುದಿಲ್ಲ.]

**References**

Chaudhri, D P (1996): *Dynamic Profile of Child Labour* in India *1951-1991,* ILO, New Delhi.

Chaudhri, D P and E J Wilson (2002): 'Nutritional Poverty, School Education and Supply of Child Labour: Explorations with States, Districts and Household Data for Rural India' in

Ramachandran N and L Massun (eds), *Coming to Grips with Rural Child Work: A Food Security Approach,* Institute for Human Development, New Delhi.

Gayathri, V and D P Chaudhri (2002): 'Introduction', *The Indian Journal of Labour Economics,* Vol 45, No 3, July-September.

Kabeer, N (2001): 'Deprivation, Discrimination and Delivery: Competing Explanations for Child Labour and Educational Failure in South Asia', IDS Working Paper 135.

Lieten, G K (2002): 'Child Labour and Poverty: The Poverty of Analysis', *The Indian Journal of Labour Economics,* Vol 45, No 3, July- September.

Mahendra, Dev S and C Ravi (2002): 'Food Security and Child Work in South India: Determinants and Policies' in N Ramachandran and L Massun (eds), *Coming to Grips with Rural Child Work: A Food Security Approach,* Institute for Human Development, New Delhi.

Weiner, Myron (1991): *The Child and the State in India,* Oxford University Press, Delhi.

Source: Child Labour: A Perspective of Locale and Context
Author(s): Piush Antony and V. Gayathri
*Economic and Political Weekly*, Vol. 37, No. 52
(Dec. 28, 2002 - Jan. 3, 2003), pp. 5186-5189